ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957

(ಕರ್ನಾಟಕ ರಾಜ್ಯಪತ್ರ, ಗುರುವಾರ, ಏಪ್ರಿಲ್ 27, 2006, ಭಾಗ – IVಎ, ಪುಟ 566 ರಿಂದ 579ರ ವರೆಗೆ ಪ್ರಕಟಿಸಲಾಗಿದೆ.)

ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು:

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸುವುದು
4. ಪುರೋಭಿವೃದ್ಧಿ ವಂತಿಗೆ ಮೊತ್ತ
5. ವಂತಿಗೆ ಸಂದಾಯವಾಗಬೇಕಾದ ಸಮಯ
6. ವಂತಿಗೆ ಸಂದಾಯದ ವಿಧಾನ
7. ವಂತಿಗೆಯನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡುವುದು
8. ಜಮೀನಿನಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯಿಂದ ವಂತಿಗೆಯ ಸಂದಾಯ
9. ವಂತಿಗೆಗೆ ಸಂಬಂಧಿಸಿದ ಹಣ ತುಂಬಿಕೊಡುವ ಹಕ್ಕು
10. ನೀರು ದರ ವಿಧಿಸುವಿಕೆ
10ಎ. ಈ ಅಧಿನಿಯಮವನ್ನು ತುಂಗಭದ್ರಾ ಯೋಜನೆಗೆ ಅನ್ವಯಿಸುವುದು
11. ನಿಯಮ ರಚನಾಧಿಕಾರ
12. ನಿರಸನ ಮತ್ತು ಉಳಿಸುವಿಕೆಗಳು

ಅಧಿಸೂಚನೆ

* * *

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

1957ರ ಅಧಿನಿಯಮ 28.– ನೀರಾವರಿ ಕಾಮಗಾರಿಯ ಪ್ರಯೋಜನ ಪಡೆದ ಜಮೀನುಗಳಿಗೆ ಸಂಬಂಧಿಸಿದಂತೆ, ಅಭಿವೃದ್ಧಿ ತೆರಿಗೆ ಮತ್ತು ನೀರಿನ ದರ ವಿಧಿಸುವ ಕ್ರಮವನ್ನು ಈಗ ಸಾರ್ವತ್ರಿಕವಾಗಿ ಅಂಗೀಕರಿಸಲಾಗಿದೆ. ಹೊಸ ಮೈಸೂರು ರಾಜ್ಯದೊಂದಿಗೆ ಏಕೀಕರಣಗೊಂಡ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ನೀರಾವರಿ ಕಾನೂನುಗಳಲ್ಲಿ, ಈ ಸಂಬಂಧದಲ್ಲಿ ರಚಿಸಲಾದ ಉಪಬಂಧಗಳಲ್ಲಿ ಏಕರೂಪತೆ ಇಲ್ಲ. ಇಡೀ ರಾಜ್ಯಕ್ಕೆ ಸಾಧ್ಯವಾದಮಟ್ಟಿಗೆ ಒಂದೇ ರೀತಿಯ ನೀರಾವರಿ ಕಾನೂನನ್ನು ಅನ್ವಯಿಸುವ ಪ್ರಶ್ನೆಯು ಪರಿಶೀಲನೆಯಲ್ಲಿದೆ. ಈ ಮಧ್ಯೆ, ಅಭಿವೃದ್ಧಿ ತೆರಿಗೆ ಮತ್ತು ನೀರಿನ ದರ ವಿಧಿಸುವುದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸುವುದು ಮತ್ತು ಅವುಗಳನ್ನು ಹೊಸ ಮೈಸೂರು ರಾಜ್ಯದಾದ್ಯಂತ ಇರುವ ಪರಿಸ್ಥಿತಿಗಳಿಗೆ ಹೊಂದಿಕೆಯಾಗುವ ಹಾಗೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 20.6.1957ರ ವಿಧಾನ ಸಭಾ ಅಧಿಸೂಚನೆ ಸಂಖ್ಯೆ 5847 ರಿಂದ ಪಡೆಯಲಾಗಿದೆ)

II

1961ರ ತಿದ್ದುಪಡಿ ಮಾಡುವ ಅಧಿನಿಯಮ 23.– ರಾಜ್ಯದಲ್ಲಿ ನೀರಾವರಿ ಕಾಮಗಾರಿಗಳ ಅಡಿಯಲ್ಲಿ ಬರುವ ಜಮೀನುಗಳಿಗೆ ಸಂಬಂಧಿಸಿದಂತೆ, ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರವನ್ನು 1957ರ ಅಕ್ಟೋಬರ್‌ನಲ್ಲಿ ಕಾನೂನಾಗಿ ಹೊರಡಿಸಲಾದ ಮೈಸೂರು ನೀರಾವರಿ (ಪುರೋಭಿವೃದ್ಧಿ ತೆರಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ ವಿಧಿಸಬೇಕಾಗುತ್ತದೆ. ಅಧಿನಿಯಮದ 4ನೇ ಪ್ರಕರಣವು, ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸುವ ಬಗ್ಗೆ ಉಪಬಂಧಿಸುತ್ತದೆ ಮತ್ತು ವಂತಿಗೆಯು ಎಕರೆಗೆ ಯಾವ ಸಂದರ್ಭದಲ್ಲಿಯೂ ಐದುನೂರು ರೂಪಾಯಿಗಳಿಗಿಂತ ಹೆಚ್ಚಾಗಿರತಕ್ಕದ್ದಲ್ಲವೆಂಬ ಬಗ್ಗೆ ಉಪಬಂಧಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಫಲಾನುಭವಿಗಳು ನೀರಾವರಿ ಕಾಮಗಾರಿಯ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಇನ್ನೂ ಹೆಚ್ಚಿನ ವಂತಿಗೆಯನ್ನು ಸಂದಾಯ ಮಾಡಲು ಸಿದ್ಧರಿರುತ್ತಾರೆಂದು ಕಂಡುಬಂದಿದೆ. ಜಮೀನಿನ ಮೌಲ್ಯದ ಹೆಚ್ಚಳವು ಎಕರೆಗೆ 1000 ರೂ.ಗಳಿಗಿಂತ ಹೆಚ್ಚಾಗಿರುವ ಸಂದರ್ಭಗಳಿದ್ದು ಅಂಥ ಸಂದರ್ಭಗಳಲ್ಲಿ, ವಂತಿಗೆ ಮೊತ್ತದ ಮೇಲೆ ಈಗ ನಿಗದಿಪಡಿಸಿರುವ ಗರಿಷ್ಠ ಮಿತಿಯಿಂದ ಅರ್ಧದಷ್ಟು ಪುರೋಭಿವೃದ್ಧಿ ಮೌಲ್ಯವನ್ನು ವಸೂಲಿ ಮಾಡಲು ಕೂಡ ಸರ್ಕಾರಕ್ಕೆ ಅಡ್ಡಿಯಾಗುವ ನಿದರ್ಶನಗಳೂ ಇವೆ. ಅಲ್ಲದೆ, ಹೆಚ್ಚಿನ ಪ್ರಕರಣಗಳಲ್ಲಿ ನೀರಾವರಿ ಕಾಮಗಾರಿಗಳಿಗೆ ಅಂದಾಜುಗಳನ್ನು ನಿರೀಕ್ಷಿತ ಹಣಕಾಸು

ವಸೂಲಿಗಳಿಗೆ ಸಂಬಂಧಪಟ್ಟಂತೆ ಮಂಜೂರು ಮಾಡಲಾಗುತ್ತದೆ. ಆದ್ದರಿಂದ ಅನೇಕ ಪ್ರಕರಣಗಳಲ್ಲಿ ವಂತಿಗೆ ಮೊತ್ತವನ್ನು ಎಕರೆ ಒಂದಕ್ಕೆ 500 ರೂ.ಗಳಿಗೆ ನಿರ್ಬಂಧಿಸದೆ 4ನೇ ಪ್ರಕರಣದ ಪರಂತುಕವನ್ನು ತಿದ್ದುಪಡಿ ಮಾಡಿದರೆ, ಕನಿಷ್ಠ ಲಾಭವನ್ನು ಪಡೆಯಬಹುದು.

ಅಧಿನಿಯಮದ 10ನೇ ಪ್ರಕರಣವು ನೀರಿನ ದರ ವಿಧಿಸುವುದಕ್ಕೆ ಸಂಬಂಧಿಸಿದುದಾಗಿದೆ. ಸದರಿ ಪ್ರಕರಣದ ಪರಂತುಕದ ಅನುಸಾರ, ಕೆಲವು ವರ್ಗದ ಪ್ರಕರಣಗಳಲ್ಲಿ ಯಾವುದೇ ನೀರಿನ ದರವನ್ನು ವಿಧಿಸಲಾಗುವುದಿಲ್ಲ. ನೀರಿನ ಸರಬರಾಜಿನ ಭರವಸೆಯ ಸ್ವರೂಪದ ಮತ್ತು ನೀರಾವರಿ ಕಾಮಗಾರಿಗಳ ನಿರ್ವಹಣೆಯ ವೆಚ್ಚದಲ್ಲಿ ಉಂಟಾದ ಹೆಚ್ಚಳದ ದೃಷ್ಟಿಯಿಂದ ಹಾಗೆ ವಿಧಿಸುವುದು ನ್ಯಾಯಯುತವೆನ್ನುವ ಸಂದರ್ಭಗಳಲ್ಲಿ ಈಗ ತರಿಭೂಮಿ ಎಂಬುದಾಗಿ ನಿರ್ಧರಣೆ ಮಾಡಿದ ಜಮೀನುಗಳ ಮೇಲೆ ನೀರಿನ ದರವನ್ನು ವಿಧಿಸಬಹುದಾದ್ದರಿಂದ ಪರಂತುಕವನ್ನು ಬಿಟ್ಟುಬಿಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಅಂತರರಾಜ್ಯ ಸ್ವರೂಪದ ಕಾಮಗಾರಿಗಳಿಗೆ ಸಂಬಂಧಿಸಿದ ಸಂದರ್ಭಗಳಲ್ಲಿ ನಿಯಮಗಳನ್ನು ರಚಿಸಲು ರಾಷ್ಟ್ರಪತಿಯ ಅನುಮೋದನೆ ಪಡೆಯಬೇಕೆಂಬ ಬಗ್ಗೆ ಉಪಬಂಧ ಕಲ್ಪಿಸುವ ಸಲುವಾಗಿ ಒಂದು ಹೊಸ ಪ್ರಕರಣವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ.

ಪ್ರಸ್ತಾವಿಸಲಾದ ಇತರ ತಿದ್ದುಪಡಿಗಳು ಮೌಖಿಕ ಸ್ವರೂಪದ್ದಾಗಿವೆ.

(ಕರ್ನಾಟಕ ರಾಜ್ಯಪತ್ರ, ಭಾಗ IV-2ಎ, ದಿನಾಂಕ 9ನೇ ಏಪ್ರಿಲ್ 1959, ಪುಟ 147ರಲ್ಲಿ ಪ್ರಕಟಿಸಲಾಗಿದೆ)

III

1964ರ ತಿದ್ದುಪಡಿ ಮಾಡುವ ಅಧಿನಿಯಮ 8.- ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ 1957, ಇದು ಸರ್ಕಾರದಿಂದ ಆದ ಯಾವುದೇ ನೀರಾವರಿ ಕಾಮಗಾರಿಯ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆ ಮೂಲಕ ಪ್ರಯೋಜನ ಪಡೆದ ಜಮೀನುಗಳಿಗೆ ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸಲು ಮತ್ತು ವಸೂಲಿ ಮಾಡಲು ಹಾಗೂ ನೀರಿನ ದರವನ್ನು ವಿಧಿಸಲು ಉಪಬಂಧ ಕಲ್ಪಿಸುತ್ತದೆ. ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ವಿಧಿಸಲಾದ ಕಾರ್ಯವಿಧಾನದ ಅನುಸಾರ ವಂತಿಗೆಯನ್ನು ನಿರ್ಧರಿಸುವ ಕೆಲಸವು ಗಣನೀಯವಾದುದು ಹಾಗೂ ಜಟಿಲವಾದುದು ಎಂದು ಕಂಡುಬಂದಿದೆ ಹಾಗೂ ಪುರೋಭಿವೃದ್ಧಿ ವಂತಿಗೆ ವಿಧಿಸುವ ಕಾರ್ಯದ ನಿಧಾನಗತಿಗೆ ಇದು ಕಾರಣವಾಗಿದೆ. ಪುರೋಭಿವೃದ್ಧಿ ವಂತಿಗೆಯ ದರಗಳನ್ನು ಅಧಿನಿಯಮದಲ್ಲಿಯೇ ನಿರ್ದಿಷ್ಟಪಡಿಸುವ ಮೂಲಕ ಮತ್ತು ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಮೂಲಕ ಈ ಅಧಿನಿಯಮದಲ್ಲಿ ವಿಧಿಸಿದ ಕಾರ್ಯವಿಧಾನವನ್ನು ಸರಳೀಕರಿಸಬಹುದೆಂದು ಪರಿಗಣಿಸಲಾಗಿದೆ. ನೀರಾವರಿ ಕಾಮಗಾರಿಗಳನ್ನು ಭಾರೀ ನೀರಾವರಿ ಕಾಮಗಾರಿ, ಮಧ್ಯಮ ನೀರಾವರಿ ಕಾಮಗಾರಿ ಮತ್ತು ಸಣ್ಣ ನೀರಾವರಿ ಕಾಮಗಾರಿ ಎಂಬುದಾಗಿಯೂ ಮತ್ತು ಪುರೋಭಿವೃದ್ಧಿ ವಂತಿಗೆಯನ್ನು ಮೂಲ ವಂತಿಗೆ ಹಾಗೂ ವಿಶೇಷ ಸೌಲಭ್ಯ ವಂತಿಗೆ ಎಂಬುದಾಗಿ ವರ್ಗೀಕರಿಸಲು ಪ್ರಸ್ತಾವಿಸಲಾಗಿದೆ. ಅಂಥ ಪುರೋಭಿವೃದ್ಧಿ ತೆರಿಗೆಯ ದರಗಳನ್ನು ಸಹ ನಿರ್ದಿಷ್ಟಪಡಿಸಿದೆ.

ಮದ್ರಾಸು ನೀರಾವರಿ ಉಪಕರ ಅಧಿನಿಯಮ, 1865ರ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮಾಡಲಾದ ನೀರಾವರಿ ಉಪಕರದ ಕೆಲವು ಸಂಗ್ರಹಣೆಗಳನ್ನು ಕ್ರಮಬದ್ಧಗೊಳಿಸುವುದೂ ಸಹ ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

IV

1965ರ ತಿದ್ದುಪಡಿ ಮಾಡುವ ಅಧಿನಿಯಮ 18.- ಬೆಳೆದ ಅಥವಾ ಬೆಳೆಯಬಹುದಾದ ವಿವಿಧ ಬೆಳೆಗಳಿಗೆ ಸಂಬಂಧಪಟ್ಟಂತೆ ಪೂರೈಸಲಾದ, ಲಭ್ಯವಾಗುವಂತೆ ಮಾಡಲಾದ ಅಥವಾ ಬಳಸಲಾದ ನೀರಿಗೆ ಸಂಬಂಧಪಟ್ಟ ಹಾಗೆ ಪ್ರಸಕ್ತ ನೀರಿನ ದರವನ್ನು ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ ಅಡಿಯಲ್ಲಿ ವಿಧಿಸಬಹುದಾಗಿದೆ.

ಜಮೀನಿನಲ್ಲಿ ಬೆಳೆದ ಅಥವಾ ಬೆಳೆಯಬಹುದಾದ ಬೆಳೆ ಅಥವಾ ಬೆಳೆಗಳಿಗೆ ಸಂಬಂಧಪಟ್ಟಂತೆ ಅಥವಾ ಸಂಬಂಧಪಟ್ಟಿಲ್ಲದಂತೆ, ವಿವಿಧ ನೀರಾವರಿ ಕಾಮಗಾರಿಗಳಿಂದ ಸರಬರಾಜು ಮಾಡಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿನ ಸಂಬಂಧದಲ್ಲಿ ವ್ಯತ್ಯಾಸವಾಗಬಹುದಾದ ನೀರಿನ ದರವನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವ 10 (1)ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 16ನೇ ಅಕ್ಟೋಬರ್ 1965ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ-IV-2ಎ, ಸಂ 202 ಪುಟ 3ರಲ್ಲಿ ಪ್ರಕಟಿಸಲಾಗಿದೆ.)

V

1966ರ ತಿದ್ದುಪಡಿ ಮಾಡುವ ಅಧಿನಿಯಮ 13.– ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957 ಕ್ಕೆ 1964ರ ಅಧಿನಿಯಮ ಸಂಖ್ಯೆ 8ರ ಮೂಲಕ ಮಾಡಲಾದ ತಿದ್ದುಪಡಿಯಲ್ಲಿ ವಿವಿಧ ನೀರಾವರಿ ಕಾಮಗಾರಿಗಳಿಂದ ಪ್ರಯೋಜನ ಪಡೆದ ಜಮೀನುಗಳ ಸಂಬಂಧದಲ್ಲಿ ಕೆಲವು ನಿರ್ದಿಷ್ಟಪಡಿಸಿದ ದರಗಳಲ್ಲಿ ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸಲು ಮತ್ತು ವಸೂಲಿ ಮಾಡಲು ಉಪಬಂಧ ಕಲ್ಪಿಸಲಾಗಿದೆ. ದರ ವಿಧಿಸುವಿಕೆಯು, ನೀರಾವರಿಯ ಪ್ರಯೋಜನ ಪಡೆದ ಜಮೀನುಗಳ ಮೌಲ್ಯದಲ್ಲಿ ಉಂಟಾಗುವ ಹೆಚ್ಚಳಕ್ಕೆ ಸಂಬಂಧಪಟ್ಟಿರಬೇಕೆಂದು ಪರಿಗಣಿಸಲಾಗಿದೆ. ಆದ್ದರಿಂದ, 3 ಮತ್ತು 4ನೇ ಪ್ರಕರಣಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

(ದಿನಾಂಕ 24ನೇ ಫೆಬ್ರವರಿ 1966ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV–2ಎ ಸಂ.31 ಪುಟ 6ರಲ್ಲಿ ಪ್ರಕಟಿಸಲಾಗಿದೆ.)

VI

1968ರ ತಿದ್ದುಪಡಿ ಮಾಡುವ ಅಧಿನಿಯಮ 16.– ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ ಅಡಿಯಲ್ಲಿ ಯಾವುದೇ ಜಮೀನಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ವಂತಿಗೆಯ ಗರಿಷ್ಠ ಮೊತ್ತವನ್ನು ಎಕರೆಗೆ ಮುನ್ನೂರು ರೂಪಾಯಿಗಳಂತೆ ನಿಗದಿಪಡಿಸಲಾಗಿದೆ. ಗರಿಷ್ಠಮಿತಿಯನ್ನು ಐದು ನೂರು ರೂಪಾಯಿಗಳಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 22ನೇ ಆಗಸ್ಟ್ 1968ರ ಕರ್ನಾಟಕ ರಾಜ್ಯಪತ್ರ ಭಾಗ IV–2ಎ, ಪುಟ 37 ಇದರಲ್ಲಿ ಪ್ರಕಟಿಸಲಾಗಿದೆ.)

VII

1974ರ ತಿದ್ದುಪಡಿ ಮಾಡುವ ಅಧಿನಿಯಮ 29.– ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ ಅನುಸಾರ, ಪುರೋಭಿವೃದ್ಧಿ ವಂತಿಗೆಯ ದರವು, ಎಕರೆಗೆ ಕನಿಷ್ಠ 500 ರೂ.ಗಳಿಗೊಳಪಟ್ಟು ಹೆಚ್ಚಾದ ಮೌಲ್ಯದ ಅರ್ಧದಷ್ಟಿತ್ತು. ನೀರಾವರಿ ಜಮೀನುಗಳ ಮೌಲ್ಯದಲ್ಲಿ ಉಂಟಾಗಿರುವ ವಾಸ್ತವ ಹೆಚ್ಚಳವನ್ನು ಪರಿಗಣಿಸಿ, ಸದರಿ ಗರಿಷ್ಠ ದರವನ್ನು ಎಕರೆಗೆ 500 ರೂ.ಗಳಿಂದ 1,500 ರೂ.ಗಳವರೆಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದ, ಸದರಿ ಉದ್ದೇಶಕ್ಕಾಗಿ ಅಧಿನಿಯಮವನ್ನು ತಿದ್ದುಪಡಿ ಮಾಡುವ ಅಧ್ಯಾದೇಶವನ್ನು 22ನೇ ಜೂನ್ 1974 ರಂದು ಪ್ರಖ್ಯಾಪಿಸಲಾಯಿತು. ನೋಟೀಸುಗಳ ಜಾರಿ ಕುರಿತಂತೆ ಆನುಷಂಗಿಕ ಉಪಬಂಧಗಳನ್ನೂ ಸಹ ಮಾಡಲಾಯಿತು.

ಸದರಿ ಆಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಬೇಕಾಗಿದೆ.

(ದಿನಾಂಕ 14ನೇ ಆಗಸ್ಟ್ 1974ರ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ IV– 2ಎ ಸಂ 2591, ಪುಟ 4ರಲ್ಲಿ ಪ್ರಕಟಿಸಲಾಗಿದೆ.)

VIII

1995ರ ತಿದ್ದುಪಡಿ ಮಾಡುವ ಅಧಿನಿಯಮ 16.– ನೀರು ನಿರ್ವಹಣೆಯಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸುವ ಉದ್ದೇಶದಿಂದ, ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ 10ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ನಿರ್ವಹಣೆ ಮತ್ತು ನೀರಿನ ದರಗಳ ವಸೂಲಿಯ ಹೊಣೆಗಾರಿಕೆಯನ್ನು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 19ನೇ ಏಪ್ರಿಲ್ 1995ರ ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆಯ ಭಾಗ IV– 2ಎ, ಸಂ 470, ಪುಟ 4ರಲ್ಲಿ ಪ್ರಕಟಿಸಲಾಗಿದೆ.)

IX

1995ರ ತಿದ್ದುಪಡಿ ಮಾಡುವ ಅಧಿನಿಯಮ 21.– ಯಾವುದೇ ನೀರಾವರಿ ಕಾಮಗಾರಿಗಳಿಗೆ ನೀರು ಸರಬರಾಜು ಮಾಡುವ ಕಾಮಗಾರಿಯನ್ನು ಕೃಷ್ಣ ಭಾಗ್ಯ ಜಲ ನಿಗಮಕ್ಕೆ ವಹಿಸಿಕೊಡಲು ಮತ್ತು ನೀರು ದರಗಳನ್ನು ನಿಗದಿಪಡಿಸುವ ಮತ್ತು ವಸೂಲಿ ಮಾಡುವ ಜವಾಬ್ದಾರಿಯನ್ನು ನೀಡಿ ಸದರಿ ನಿಗಮವನ್ನು

ಶಕ್ತಗೊಳಿಸಲು ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957 ಇದನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಸಂಬಂಧಪಟ್ಟ ವಿಧೇಯಕದಿಂದ, ಎಂದರೆ ವಿ.ಸ ವಿಧೇಯಕ ಸಂಖ್ಯೆ 1995ರ 17 ರಿಂದ ಪಡೆಯಲಾಗಿದೆ.)

X

2000ದ ತಿದ್ದುಪಡಿ ಮಾಡುವ ಅಧಿನಿಯಮ 24.– ನೀರಿನ ನಿರ್ವಹಣೆಯಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸಲು ನೀರಾವರಿಯ ನೀರು ನಿರ್ವಹಣಾ ವ್ಯವಸ್ಥೆಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಅವುಗಳ ಮಹಾಮಂಡಲಗಳ ಮೂಲಕ ರೈತರನ್ನು ತೊಡಗಿಸಿಕೊಳ್ಳುವುದು ಮತ್ತು ಅವರಿಗೆ ಅಧಿಕಾರ ನೀಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ, ಕರ್ನಾಟಕ ನೀರಾವರಿ ಅಧಿನಿಯಮ, 1965ನ್ನು ಈ ಮುಂದಿನಂತೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ,–

(i) ನೀರಾವರಿ ಕಾಮಗಾರಿಗಳ ನಿಯಂತ್ರಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ನೀರು ಬಳಕೆದಾರರ ಸಂಘಗಳಿಗೆ ವಹಿಸಿಕೊಡಲು ಉಪಬಂಧಿಸುವುದು;

(ii) ಕಾಲುವೆಗಳನ್ನು ದಾಟಲು ಮಾರ್ಗಗಳನ್ನು ಒದಗಿಸಲು ಮತ್ತು ಒಳಚರಂಡಿಗಳಿಗೆ ಉಂಟಾಗುವ ಅಡಚಣೆಗಳನ್ನು ನಿವಾರಿಸಲು ಅಡಿಗಾಲುವೆ ಇತ್ಯಾದಿಗಳನ್ನು ನಿರ್ಮಾಣ ಮಾಡಲು ನೀರು ಬಳಕೆದಾರ ಸಂಘಗಳನ್ನು ಸಮರ್ಥಗೊಳಿಸುವುದು;

(iii) ಅವಶ್ಯವಿರುವೆಡೆಯಲ್ಲೆಲ್ಲ, ಒಳಚರಂಡಿಯನ್ನು ನಿರ್ಮಿಸಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(iv) ಬಳಕೆದಾರರು ಹೊಲಕಾಲುವೆಯನ್ನು ದುರಸ್ತಿ ಮಾಡಲು ತಪ್ಪಿದ ಸಂದರ್ಭದಲ್ಲಿ ನೀರು ಬಳಕೆದಾರರ ಸಂಘವು ಹೊಲಕಾಲುವೆಯನ್ನು ದುರಸ್ತಿಗೊಳಿಸಲು ಮತ್ತು ಅದರ ವೆಚ್ಚಗಳನ್ನು ಬಳಕೆದಾರನಿಂದ ವಸೂಲು ಮಾಡಲು ಅಧಿಕಾರ ನೀಡುವುದು;

(v) ನೀರಾವರಿ ಕಾಮಗಾರಿಯಿಂದ ನೀರು ಸರಬರಾಜನ್ನು ನಿಯಂತ್ರಿಸಲು ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಲದೊಂದಿಗೆ ಸಮಾಲೋಚಿಸಲು ಉಪಬಂಧ ಕಲ್ಪಿಸುವುದು;

(vi) ನೀರನ್ನು ತಾತ್ಕಾಲಿಕವಾಗಿ ದೊರಕುವಂತೆ ಮಾಡಿದಾಗ ಹಾಗೂ ನೀರನ್ನು ಅನಧಿಕೃತವಾಗಿ ಬಳಸಿದಾಗ ಅದಕ್ಕೆ ನೀರಿನ ದರವನ್ನು ವಿಧಿಸಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(vii) ಬೆಳೆಯುವ ಮಾದರಿಯನ್ನು ಉಲ್ಲಂಘಿಸಿದ ಮತ್ತು ನೀರು ದರಗಳನ್ನು ಸಂದಾಯ ಮಾಡದಿದ್ದ ಸಂದರ್ಭದಲ್ಲಿ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಲು ಮತ್ತು ಬೆಳೆಯ ಉಲ್ಲಂಘನೆಯ ಸಂದರ್ಭಗಳಲ್ಲಿ ದಂಡ ರೂಪದ ನೀರಿನ ದರವನ್ನು ವಿಧಿಸಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(viii) ನೀರು ಬಳಕೆದಾರರ ಸಂಘಗಳ ಅಧಿಕಾರ ವ್ಯಾಪ್ತಿಯೊಳಗೆ ಇರುವ ಜಮೀನುಗಳ ಸಂಬಂಧದಲ್ಲಿ ನಿರ್ವಹಣಾ ಉಪಕರವನ್ನು ವಿಧಿಸುವುದರಿಂದ ವಿನಾಯಿತಿಗೊಳಿಸುವುದು;

(ix) ಅಪರಾಧಗಳ ಸಂಬಂಧದಲ್ಲಿ ರಾಜಿ ಮಾಡಿಕೊಳ್ಳಲು ಉಪಬಂಧ ಕಲ್ಪಿಸುವುದು;

(x) ನೀರು ಬಳಕೆದಾರರ ಪರಿಹಾರಕ್ಕೆ ಉನ್ನತ ಮಟ್ಟದ ಮಹಾ ಮಂಡಲದ ಉಪಬಂಧ ಕಲ್ಪಿಸುವುದು;

(xi) ನೀರು ಬಳಕೆದಾರರ ಸಂಘ, ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಲ, ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಲ ಮತ್ತು ನೀರು ಬಳಕೆದಾರರ ಉನ್ನತ ಮಟ್ಟದ ಮಹಾಮಂಡಲ – ಇವುಗಳ ಪ್ರಕಾರ್ಯಗಳನ್ನು ರೂಪಿಸುವುದು.

ಅಲ್ಲದೆ, ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಮಾತ್ರ ಅಧಿನಿಯಮವು ಅನ್ವಯಿಸುವಂತೆ ನಿರ್ಬಂಧಿಸಲು ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಲಾದ ಸಂಘಗಳಿಗೆ ನಿರ್ಬಂಧಿಸದಿರಲು ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದುದರಿಂದ, ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ನೀರಾವರಿ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2000 ಇದನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಿಗೆ ವಿಧೇಯಕವನ್ನು ಮಂಡಿಸಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

(2000ದ ವಿಧಾನಸಭಾ ವಿಧೇಯಕ ಸಂ. 29ರಿಂದ ಪಡೆಯಲಾಗಿದೆ.)

XI

2002ರ ತಿದ್ದುಪಡಿ ಮಾಡುವ ಅಧಿನಿಯಮ 8.– ಕರ್ನಾಟಕ ನೀರಾವರಿ ಅಧಿನಿಯಮ, 1965ನ್ನು ಸೂಕ್ತ ತಿದ್ದುಪಡಿ ಮಾಡುವ ಮೂಲಕ ನೀರು ಬಳಕೆದಾರರು, ನೀರು ಬಳಕೆದಾರರ ಯೋಜನಾ ಮಟ್ಟದ ಒಕ್ಕೂಟದ ಸದಸ್ಯರಾಗಲು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಯಾವುದೇ ನೀರಾವರಿ ಕಾಮಗಾರಿಯಿಂದ ನೀರನ್ನು ಸರಬರಾಜು ಮಾಡುವ ಮತ್ತು ತನ್ಮೂಲಕ ನೀರು ದರಗಳನ್ನು ವಿಧಿಸುವ ಮತ್ತು ವಸೂಲಿ ಮಾಡುವ ಕೆಲಸವನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವಹಿಸುವ ಸಲುವಾಗಿ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನದರ ವಿಧಿಸುವಿಕೆ) ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಸಹ ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ವಿಧಾನಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ಆ ಉದ್ದೇಶವನ್ನು ಸಾಧಿಸಲು, ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧ್ಯಾದೇಶ, 2001 (2001ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 6) ಇದನ್ನು ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2002ರ ವಿಧಾನ ಸಭಾ ವಿಧೇಯಕ ಸಂಖ್ಯೆ 2)

XII

2002ರ ತಿದ್ದುಪಡಿ ಮಾಡುವ ಅಧಿನಿಯಮ 9.– ಈ ಮುಂದಿನವುಗಳನ್ನು ಉಪಬಂಧಿಸಲು, ಎಂದರೆ,– (i) "ನೀರು ಬಳಕೆದಾರರ ಸಂಘ" ಎಂಬುದಕ್ಕೆ ಒಂದು ಪ್ರತ್ಯೇಕ ಪರಿಭಾಷೆಯನ್ನು ಕಲ್ಪಿಸುವುದಕ್ಕಾಗಿ ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೀರು ಬಳಕೆದಾರರ ಸಂಘವು ನೋಂದಣಿಯಾಗುವವರೆಗೆ 2000 ಹೆಕ್ಟೇರ್‌ಗಿಂತ ಕಡಿಮೆ ಭೂಮಿಗೆ ನೀರಾವರಿ ಸೌಕರ್ಯ ಕಲ್ಪಿಸುವ ಸಣ್ಣ ನೀರಾವರಿ ಕೆರೆಗಳಿಗೆ ಸಂಬಂಧಪಟ್ಟಂತೆ ಈ ತಿದ್ದುಪಡಿ ಅಧಿನಿಯಮ ಪ್ರಾರಂಭವಾಗುವುದಕ್ಕೆ ಮುಂಚೆ ನೋಂದಾವಣಿಯು ಅಸ್ತಿತ್ವದಲ್ಲಿರುವ ನೀರು ಬಳಕೆದಾರರ ಸಂಘಗಳ ಮುಂದುವರಿಕೆಗಾಗಿ ಉಪಬಂಧ ಕಲ್ಪಿಸುವುದು;

(ii) ನೀರು ಬಳಕೆದಾರರ ಸಂಘಕ್ಕೆ 4,10,14 ಮತ್ತು 27ನೇ ಪ್ರಕರಣಗಳ ಅಡಿಯಲ್ಲಿ ಕೆಲವು ಅಧಿಕಾರಗಳನ್ನು ಪ್ರದಾನ ಮಾಡುವುದು;

(iii) ನೀರು ಬಳಕೆದಾರರ ಸಂಘಕ್ಕೆ ನಿರ್ವಹಣಾ ಉಪಕರದಿಂದ ವಿನಾಯಿತಿ ನೀಡುವುದು;

(iv) ನೀರು ಬಳಕೆದಾರರ ಸಂಘದ ಪ್ರಕಾರ್ಯಗಳನ್ನು ಪರಿಭಾಷಿಸುವುದು

– ಕರ್ನಾಟಕ ನೀರಾವರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ನೀರು ಬಳಕೆದಾರರ ಸಂಘದ ಮೇಲೆ ನೀರಿನ ದರ ವಿಧಿಸಲು ಮತ್ತು ಅದು ಪ್ರತಿಯಾಗಿ ನೀರು ಬಳಕೆದಾರರಿಂದ ನೀರಿನ ವೆಚ್ಚಗಳನ್ನು ಸಂಗ್ರಹಿಸಲು ಸಾಧ್ಯವಾಗುವಂತೆ ಮಾಡಲು ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ನ್ನು ಸಹ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಈ ಉದ್ದೇಶವನ್ನು ಸಾಧಿಸಲು ಕರ್ನಾಟಕ ನೀರಾವರಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2002ನ್ನು (2002ರ ಕರ್ನಾಟಕ ಅಧ್ಯಾದೇಶ 1) ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭಾ ವಿಧೇಯಕ ಸಂಖ್ಯೆ 7).

1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 28

(1957ರ ಅಕ್ಟೋಬರ್ ಮೂವತ್ತ ಒಂದನೇ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ] ದಲ್ಲಿ ಮೊದಲು ಪ್ರಕಟವಾಗಿದೆ.)

[1][ಕರ್ನಾಟಕ][1] ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957

(1957ರ ಅಕ್ಟೋಬರ್ ಇಪ್ಪತ್ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ.)

(ಕರ್ನಾಟಕ ಅಧಿನಿಯಮ 1961ರ 23, 1964ರ 8, 1965ರ 18, 1966ರ 13, 1968ರ 16, 1974ರ 29, 1995ರ 16, 1995ರ 21, 2000ದ 24, 2002ರ 8 ಮತ್ತು 2002ರ 9ರಿಂದ ತಿದ್ದುಪಡಿಯಾದಂತೆ.)

[1][ಕರ್ನಾಟಕ ರಾಜ್ಯ][1] ದಲ್ಲಿ ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರಗಳನ್ನು ವಿಧಿಸುವ ಕಾನೂನುಗಳನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ಪುರೋಭಿವೃದ್ಧಿ ವಂತಿಗೆಯನ್ನು ಮತ್ತು ನೀರು ದರವನ್ನು ವಿಧಿಸುವುದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಂಟನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.- (1) ಈ ಅಧಿನಿಯಮವನ್ನು [1][ಕರ್ನಾಟಕ][1] ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957 ಎಂದು ಕರೆಯತಕ್ಕದ್ದು.

(2) ಇದು, ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆಯ ಮೂಲಕ 1.9.1960ರಿಂದ ಜಾರಿಗೆ ಬಂದಿದೆ. ಸದರಿ ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

2. ಪರಿಭಾಷೆಗಳು.- (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

[1][(ಎ) "ಜಿಲ್ಲಾಧಿಕಾರಿ" ಎಂದರೆ ಒಂದು ಜಿಲ್ಲೆಯ ಜಿಲ್ಲಾಧಿಕಾರಿ ಅಥವಾ ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾಧಿಕಾರಿಯ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕ ಮಾಡಬಹುದಾದ ಸಹಾಯಕ ಆಯುಕ್ತನ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ಅಂಥ ಇತರ ಅಧಿಕಾರಿ;][1]

1 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) "ಪುರೋಭಿವೃದ್ಧಿ ವಂತಿಗೆ ವಿಧಿಸುವ ಅಧಿಕಾರಿ" ಎಂದರೆ ಸರ್ಕಾರವು ಯಾವುದೇ ಪ್ರದೇಶದ ಅಥವಾ ನೀರಾವರಿ ಕಾಮಗಾರಿಯ ಸಂಬಂಧದಲ್ಲಿ ಪುರೋಭಿವೃದ್ಧಿ ವಂತಿಗೆ ವಿಧಿಸುವ ಅಧಿಕಾರಿ ಎಂದು ನೇಮಕ ಮಾಡಬಹುದಾದಂಥ ಅಧಿಕಾರಿ;

1. 1964ರ ಅಧಿನಿಯಮ 8ರ ಮೂಲಕ 31.10.1957ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿಎ) "ವಂತಿಗೆ" ಎಂದರೆ 3 ಮತ್ತು 4ನೇ ಪ್ರಕರಣದ ಅಡಿಯಲ್ಲಿ [1][ಪುರೋಭಿವೃದ್ಧಿ ವಂತಿಗೆ][1] ಯಾಗಿ ಸಂದಾಯ ಮಾಡಬೇಕಾದ ತೆರಿಗೆ][1]

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) "ಚರಂಡಿ ಕಾಮಗಾರಿ" ಎಂಬುದು,-

(i) ನಿರುಪಯುಕ್ತ ಅಥವಾ ಹೆಚ್ಚುವರಿ ನೀರನ್ನು ಹೊರ ಹಾಕಲು ನೈಸರ್ಗಿಕವಾಗಿಯಾಗಲಿ ಅಥವಾ ಕೃತಕವಾಗಿಯಾಗಲಿ ಇರುವ ಕಾಲುವೆಗಳು ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಸಹಾಯಕವಾದ ಅಂಥ ಕಾಮಗಾರಿಗಳ ಎಲ್ಲ ಕಾಮಗಾರಿಗಳು ;

(ii) ಒಂದು ನೀರಾವರಿ ಕಾಮಗಾರಿಯಿಂದ ನೀರನ್ನು ಹೊರ ಹಾಕುವ ಕಾಲುವೆಗಳು;

(iii) ಅಣೆಕಟ್ಟುಗಳು, ಕೋಡಿಗಳು, ತಡೆ ಒಡ್ಡುಗಳು, ತೂಬುಗಳು ಮತ್ತು ತಡೆಗಟ್ಟುಗಳನ್ನು;

(iv) ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಜಮೀನನ್ನು, ಪ್ರವಾಹ ಅಥವಾ ಭೂ ಸವೆತದಿಂದ ಸಂರಕ್ಷಿಸಲು ಕೈಗೊಳ್ಳುವ ಎಲ್ಲ ಕಾಮಗಾರಿಗಳು ಒಳಗೊಳ್ಳುತ್ತವೆ. ಆದರೆ, ತ್ಯಾಜ್ಯ ವಸ್ತುಗಳನ್ನು ಹೊರಹಾಕುವ ಕಾಮಗಾರಿಗಳು ಇದರಲ್ಲಿ ಸೇರುವುದಿಲ್ಲ;

(ಡಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಇ) "ನೀರಾವರಿ ಕಾಮಗಾರಿ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ,-

(i) ನೀರು ಪೂರೈಕೆಗಾಗಿ ಅಥವಾ ಸಂಗ್ರಹಕ್ಕಾಗಿ ಬಳಸುವ ಎಲ್ಲ ನಾಲೆಗಳು, ಕಾಲುವೆಗಳು, ಕೆರೆಗಳು, ಬಾವಿಗಳು, ಜಲಾಶಯಗಳು, ಅಣೆಕಟ್ಟುಗಳು, ಬಾಂಧಾರಗಳು, ಕೊಳಗಳು, ಚಿಲುಮೆಕೊಳಗಳು, ಕುಂಟೆಗಳು, ತಲಪರಿಗೆಗಳು ಮತ್ತು ಮಡುಗಳು ಮತ್ತು ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನೀರೆತ್ತುವ ಸಾಧನಗಳ ಸ್ಥಾಪನೆ, ಅದಕ್ಕೆ ಜೋಡಿಸಿದ ಅಥವಾ ಪೂರಕವಾದ ನೀರು ಪೂರೈಸುವ ಮತ್ತು ಹೊರಹಾಕುವ ಕಾಲುವೆ ಸೇರಿದಂತೆ ಎಲ್ಲ ಕಾಮಗಾರಿಗಳು, ಏರಿತಡೆಗಳು ಮತ್ತು ರಚನೆಗಳು, ಸ್ಥಾಪನೆಗಳು;

(ii) ಸರ್ಕಾರದ ಆಸ್ತಿಯಾಗಿರುವ ಜಮೀನುಗಳ ಮೇಲೆ ಇರುವ ಅಂಥ ಎಲ್ಲ ಕೊಳಗಳು ಮತ್ತು ನೈಸರ್ಗಿಕ ನೀರು ಸಂಗ್ರಹಗಳು ಅಥವಾ ಅದರ ಭಾಗಗಳು;

(iii) ಎಲ್ಲ ನೈಸರ್ಗಿಕ ಜಲ ಮಾರ್ಗಗಳು, ನದಿಗಳು ಮತ್ತು ತೊರೆಗಳು ಅಥವಾ ಅದರ ಭಾಗಗಳು;

(ಎಫ್) ಭೂ ಹಿಡುವಳಿದಾರ ಅಥವಾ ಹಿಡುವಳಿದಾರ ಎಂಬುದು, ವ್ಯಕ್ತಿಯ ಸ್ವಂತ ಹೆಸರಿನಲ್ಲಾಗಲಿ ಅಥವಾ ಮತ್ತೊಬ್ಬ ವ್ಯಕ್ತಿಗಾಗಿ ಅಥವಾ ವ್ಯಕ್ತಿಗಳ ಒಂದು ವರ್ಗಕ್ಕೆ ಅಥವಾ ಸಾರ್ವಜನಿಕರಿಗಾಗಿ ನ್ಯಾಸದಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯಾಗಲಿ ಜಮೀನನ್ನು ಹೊಂದುವ ಹಕ್ಕು ನಿಹಿತವಾಗಿರುವ ವ್ಯಕ್ತಿಯನ್ನು ಸೂಚಿಸುತ್ತದೆ ಮತ್ತು ಇದು ಸ್ವಾಧೀನಾನುಭವದ ಹಕ್ಕು ನಿಹಿತವಾಗಿರುವ ಒಬ್ಬ ಅಡಮಾನದಾರನನ್ನು ಒಳಗೊಳ್ಳುತ್ತದೆ:

ಪರಂತು, ದಕ್ಷಿಣ ಕನ್ನಡ ಜಿಲ್ಲೆಯ ಒಳವರ್ಗದಾರ, ಖಾಯಂ ಗೇಣಿದಾರ, ಖಾಯಂ ಬಾಡಿಗೆದಾರ ಅಥವಾ ಮೂಲಗೇಣಿದಾರನ ಸ್ವಾಧೀನದಲ್ಲಿರುವ ಯಾವುದೇ ಜಮೀನಿಗೆ ಸಂಬಂಧಪಟ್ಟಂತೆ, ಸಂದರ್ಭಾನುಸಾರ, ಅಂಥ ಒಳವರ್ಗದಾರನನ್ನು ಖಾಯಂ ಗೇಣಿದಾರನನ್ನು, ಖಾಯಂ ಬಾಡಿಗೆದಾರ ಅಥವಾ ಮೂಲ ಬಾಡಿಗೆದಾರನನ್ನು ಭೂ ಹಿಡುವಳಿದಾರನೆಂದು ಭಾವಿಸತಕ್ಕದ್ದು.

[1][(ಎಫ್ಎ), (ಎಫ್‌ಬಿ), (ಎಫ್‌ಸಿ) xxx;][1]

1. 1966ರ ಅಧಿನಿಯಮ ಸಂಖ್ಯೆ 13ರ ಮೂಲಕ 01.09.1960ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಜಿ) "ಅಧಿಸೂಚನೆ" ಎಂದರೆ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಒಂದು ಸರ್ಕಾರಿ ಅಧಿಸೂಚನೆ;

(ಎಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು.

[1][(ಎಚ್ಎ) "ನಿಯಮಿಸಲಾದ ಅಧಿಕಾರಿ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಅಧಿಕಾರಿ ಮತ್ತು ಬೇರೆ ಬೇರೆ ಪ್ರದೇಶಗಳಿಗೆ, ನೀರಾವರಿ ಕಾಮಗಾರಿಗಳಿಗೆ ಅಥವಾ ಉದ್ದೇಶಗಳಿಗೆ ಬೇರೆ ಬೇರೆ ಅಧಿಕಾರಿಗಳನ್ನು ನಿರ್ದಿಷ್ಟಪಡಿಸಬಹುದು;][1]

1. 1968ರ ಅಧಿನಿಯಮ ಸಂಖ್ಯೆ 4ರ ಮೂಲಕ 31.10.1957 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಐ) "ಕಾಮಗಾರಿ" ಎಂದರೆ ಪೂರ್ಣಗೊಂಡಿರುವ ಅಥವಾ ಪೂರ್ಣಗೊಂಡಿಲ್ಲದ ನೀರಾವರಿ ಅಥವಾ ಚರಂಡಿ ಕಾಮಗಾರಿ.

[1][(2) xxxx][1]

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

3. ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸುವುದು.- [1][(1) ಈ ಅಧಿನಿಯಮದ ಪ್ರಾರಂಭದ ನಂತರವಾಗಲಿ ಅಥವಾ ಅಂಥ ಪ್ರಾರಂಭಕ್ಕೆ ಮುಂಚಿನ ಆದರೆ, -

1. 1964ರ ಅಧಿನಿಯಮ 8ರ ಮೂಲಕ 31.10.1957ರಿಂದ ಜಾರಿಗೆ ಬರುವಂತೆ ಪುನರ್ ಸಂಖ್ಯೆ ನೀಡಲಾಗಿದೆ ಮತ್ತು ಪ್ರತಿಯೋಜಿಸಲಾಗಿದೆ.

(i) ಮೈಸೂರು ಪ್ರದೇಶದಲ್ಲಿ 1944ರ ಜನವರಿ ಒಂದನೇ ದಿನಾಂಕಕ್ಕೆ ;

(ii) [1][ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶ][1] ದಲ್ಲಿ 1947ರ ಜನವರಿ ಒಂದನೇ ದಿನಾಂಕಕ್ಕೆ;

(iii) [1][ಗುಲ್ಬರ್ಗಾ ಪ್ರದೇಶ][1] ದಲ್ಲಿ 1947ರ ಒಂದನೇ ಆಗಸ್ಟ್ ದಿನಾಂಕಕ್ಕೆ ; ಮತ್ತು

(iv) [1][ಬೆಳಗಾವಿ ಪ್ರದೇಶ][1] ದಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ 1950ರ ಜನವರಿ ಒಂದನೇ ದಿನಾಂಕಕ್ಕೆ

– ಮುಂಚಿನದಲ್ಲದ ಯಾವುದೇ ಕಾಲದಲ್ಲಾಗಲಿ ಸರ್ಕಾರವು ಮಾಡಿದ ಯಾವುದೇ ನಿರ್ಮಾಣದಿಂದ, ಜೀರ್ಣೋದ್ಧಾರದಿಂದ, ವಿಸ್ತರಣೆಯಿಂದ ಅಥವಾ ಬದಲಾವಣೆಯಿಂದ [2][ಪ್ರಯೋಜನ ಹೊಂದಿದ ಭೂ ಹಿಡುವಳಿದಾರನಿಂದ ಅಥವಾ ಯಾವುದೇ ಭೂಮಿಯ ಹಿಡುವಳಿದಾರನಿಂದ][2] ಪುರೋಭಿವೃದ್ಧಿ ವಂತಿಗೆ ಎಂದು ಕರೆಯಲಾಗುವ ಒಂದು ತೆರಿಗೆಯನ್ನು [2][ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ][2] ವಿಧಿಸತಕ್ಕದ್ದು.][2]

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1966ರ ಅಧಿನಿಯಮ 13 ರ ಮೂಲಕ 1.9.1960 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ –I ಪ್ರಯೋಜನವನ್ನು ಉಪಯೋಗಿಸಿಕೊಳ್ಳದಿದ್ದಾಗ್ಯೂ ಜಮೀನು ಪ್ರಯೋಜನ ಹೊಂದಿದೆ ಎಂದು ಭಾವಿಸತಕ್ಕದ್ದು, ಆದರೆ, ಅಂಥ ಪ್ರಯೋಜನ ಬಳಸಿಕೊಳ್ಳದೇ ಇದ್ದುದಕ್ಕೆ ಅಂಥ ಜಮೀನಿನಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯ ಅಥವಾ ವ್ಯಕ್ತಿಗಳ ಕ್ರಿಯೆ ಅಥವಾ ನಿಷ್ಕ್ರಿಯೆ ಮಾತ್ರವೇ ಕಾರಣವಾಗಿರುತ್ತದೆ;

ವಿವರಣೆ–II ಸರ್ಕಾರದ ವೆಚ್ಚದಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯಾಗಲಿ ಈಗಿರುವ ಕಾಮಗಾರಿಯ ಸಾಮಾನ್ಯ ದುರಸ್ತಿಗಳು ಮತ್ತು ನಿರ್ವಹಣೆಯ ಕಾರಣ ಮಾತ್ರದಿಂದಲೇ ಜಮೀನು ಪ್ರಯೋಜನ ಹೊಂದಿದೆಯೆಂದು ಭಾವಿಸತಕ್ಕದ್ದಲ್ಲ.

[1][**ವಿವರಣೆ–III** ಈ ಉಪ ಪ್ರಕರಣದಲ್ಲಿ, "ಸರ್ಕಾರ" ಎಂಬ ಪದವು, ಆಂಧ್ರ ರಾಜ್ಯ ಅಧಿನಿಯಮ, 1953ರ (1953ರ ಕೇಂದ್ರ ಅಧಿನಿಯಮ 30) 66ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಪ್ರಾಧಿಕಾರವನ್ನು ಒಳಗೊಳ್ಳುವುದೆಂದು ಭಾವಿಸತಕ್ಕದ್ದು.][1]

[1][(2) ಅಭಿವೃದ್ಧಿ ವಂತಿಗೆ ವಿಧಿಸುವ ಉದ್ದೇಶಗಳಿಗಾಗಿ, ನಿರ್ದಿಷ್ಟಪಡಿಸಲಾದ ಅಧಿಕಾರಿಯು ಅಧಿಸೂಚನೆಯ ಮೂಲಕ, –

1. 1964ರ ಅಧಿನಿಯಮ 8ರ ಮೂಲಕ 31.10.1957ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(i) ಯಾವುದೇ ನೀರಾವರಿ ಕಾಮಗಾರಿಯ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆಯ ಪ್ರಾರಂಭದ ಮತ್ತು ಪೂರ್ಣಗೊಳ್ಳುವ ದಿನಾಂಕಗಳನ್ನು ;

[1][(ii), (iii) xxx][1]

1. 1966 ರ ಅಧಿನಿಯಮ 13 ರ ಮೂಲಕ 1.9.1960 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

– ನಿರ್ದಿಷ್ಟಪಡಿಸತಕ್ಕದ್ದು ಮತ್ತು ಒಂದೇ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆದ ವಿವಿಧ ಜಮೀನುಗಳಿಗೆ ಸಂಬಂಧಿಸಿದಂತೆ, ಅಂಥ ಜಮೀನುಗಳಿಗೆ ನೀರು ಒದಗಿಸುವ ದಿನಾಂಕಗಳನ್ನು ಅವಲಂಬಿಸಿ, ಯಾವುದೇ ನೀರಾವರಿ ಕಾಮಗಾರಿಯು ಪ್ರಾರಂಭವಾಗುವ ಹಾಗೂ ಪೂರ್ಣಗೊಳ್ಳುವ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(3) ಸರ್ಕಾರವು ತಾನಾಗಿಯೇ ಆಗಲಿ, ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಿಂದ ಬಾಧಿತನಾದ ಯಾರೇ ಭೂ ಹಿಡುವಳಿದಾರನ ಅರ್ಜಿಯ ಮೇಲೆ ಆಗಲಿ, ಯಾವುದೇ ಅಂಥ ಅಧಿಸೂಚನೆಯಲ್ಲಿ ಯಾವುದೇ ದೋಷ ಇದೆ ಎಂಬ ಬಗ್ಗೆ ಮನದಟ್ಟಾದರೆ, ತಾನು ಸೂಕ್ತವೆಂದು ಭಾವಿಸುವಂಥ ಅಧಿಸೂಚನೆಯ ಮಾರ್ಪಾಟನ್ನು ನಿರ್ದೇಶಿಸಬಹುದು ಮತ್ತು ಅಧಿಸೂಚನೆಯನ್ನು ತದನುಸಾರವಾಗಿ ನಿಯಮಿಸಲಾದ ಅಧಿಕಾರಿಯು ಮಾರ್ಪಾಟು ಮಾಡತಕ್ಕದ್ದು.][1]

[1][4. **ಪುರೋಭಿವೃದ್ಧಿ ವಂತಿಗೆ ಮೊತ್ತ.**– (1) 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಜಮೀನಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ವಂತಿಗೆಯ ಮೊತ್ತವು, ನೀರಾವರಿ ಕಾಮಗಾರಿಯ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆಯು ಪ್ರಾರಂಭಗೊಂಡ ದಿನಾಂಕಕ್ಕೆ ಮೊದಲಿನ ಅಂಥ ಜಮೀನಿನ ಮಾರುಕಟ್ಟೆ ಮೌಲ್ಯ ಮತ್ತು ಅಂತಹ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆಯು ಪೂರ್ಣಗೊಂಡ ತರುವಾಯದ ದಿನಾಂಕಕ್ಕೆ ಇದ್ದ ಮಾರುಕಟ್ಟೆ ಮೌಲ್ಯ – ಇವುಗಳ ನಡುವಿನ ವ್ಯತ್ಯಾಸದ ಅರ್ಧದಷ್ಟು ಮೊತ್ತಕ್ಕೆ ಸಮನಾಗಿರತಕ್ಕದ್ದು:

ಪರಂತು, ಯಾವುದೇ ಜಮೀನಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ವಂತಿಗೆಯ ಮೊತ್ತವು ಪ್ರತಿ ಎಕರೆಗೆ [2][ಒಂದು ಸಾವಿರದ ಐದು ನೂರು ರೂಪಾಯಿಗಳ][2] ಗಿಂತ ಹೆಚ್ಚಾಗಿರತಕ್ಕದ್ದಲ್ಲ:

1. 1966 ರ ಅಧಿನಿಯಮ 13 ರ ಮೂಲಕ 1.9.1960 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1974ರ ಅಧಿನಿಯಮ 29ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮತ್ತೂ ಪರಂತು,-

(i) ವ್ಯವಸಾಯ ಯೋಗ್ಯವಲ್ಲದ (ಖರಾಬ್);

(ii) ಒಂದು ನೂರು ಎಕರೆಗಿಂತ ಹೆಚ್ಚಿನ ಜಮೀನಿಗೆ ನೀರಾವರಿ ಒದಗಿಸಲು ಸಾಧ್ಯವಾಗದಂಥ, ಕೆರೆ, ಬಾವಿ, ಜಲಾಶಯ, ಅಣೆಕಟ್ಟು, ಬಾಂಧಾರ, ಕೊಳ, ಚಿಲುಮೆ ಕೊಳ, ಕುಂಟೆ, ತಲಪರಿಗೆ ಅಥವಾ ಮಡುವಿನ ಪ್ರಯೋಜನ ಪಡೆದ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆ ಹೊಂದಿದ

-ಭೂಮಿಯ ಸಂಬಂಧದಲ್ಲಿ ಯಾವುದೇ ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸತಕ್ಕದ್ದಲ್ಲ:

ಅಲ್ಲದೆ ಪರಂತು, ಈ ಉಪಪ್ರಕರಣದ ಉದ್ದೇಶಗಳಿಗಾಗಿ ಭೂ-ಹಿಡುವಳಿದಾರನು ಜಮೀನಿನಲ್ಲಿ ಮಾಡಿದ ಯಾವುದೇ ಸುಧಾರಣೆಯಿಂದಾಗಿ ಮಾರುಕಟ್ಟೆಯ ಮೌಲ್ಯದಲ್ಲಿ ಉಂಟಾದ ಹೆಚ್ಚಳವನ್ನು ಬಿಟ್ಟುಬಿಡತಕ್ಕದ್ದು.

(2) ಯಾವುದೇ ನೀರಾವರಿ ಕಾಮಗಾರಿಯ ಸಂಬಂಧದಲ್ಲಿ, 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸುವ ಅಧಿಕಾರಿಯು, (1)ನೇ ಉಪ ಪ್ರಕರಣದ ಉಪಬಂಧಗಳಿಗನುಸಾರವಾಗಿ, ಪುರೋಭಿವೃದ್ಧಿ ವಂತಿಗೆಯನ್ನು ಸಂದಾಯ ಮಾಡಬೇಕಾದ ನೀರಾವರಿ ಕಾಮಗಾರಿ ಅಚ್ಚುಕಟ್ಟಿನಲ್ಲಿ ನೀರಾವರಿಗೆ ಒಳಪಡುವ ಜಮೀನುಗಳನ್ನು ಮತ್ತು ನೀರಾವರಿಗೊಳಪಡಬಹುದಾದ ವಿವಿಧ ಜಮೀನುಗಳ ವ್ಯಾಪ್ತಿಯನ್ನು ತೋರಿಸುವ ಒಂದು ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ಹಾಗೆ ತಯಾರಿಸಿದ ವಿವರಣೆ ಪಟ್ಟಿಯನ್ನು, ಸಾರ್ವಜನಿಕ ನೋಟೀಸಿನೊಂದಿಗೆ ಗ್ರಾಮಛಾವಡಿಯಲ್ಲಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಮತ್ತು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸತಕ್ಕದ್ದು. ಅಂಥ ನೋಟೀಸಿನಲ್ಲಿ ನೀರಾವರಿಗೊಳಪಡುವ ಅಚ್ಚುಕಟ್ಟಿನಲ್ಲಿರುವ ಭೂ ಹಿಡುವಳಿದಾರರು ಅದರಲ್ಲಿ ತಿಳಿಸಿದ ವೇಳೆಯಲ್ಲಿ ಮತ್ತು ಅಂಥ ಸ್ಥಳದಲ್ಲಿ (ಅಂತಹ ವೇಳೆಯು ನೋಟೀಸು ಪ್ರಕಟಗೊಂಡ ದಿನಾಂಕದಿಂದ ಒಂದು ತಿಂಗಳಿಗಿಂತ ಮೊದಲು ಆಗಿರತಕ್ಕದ್ದಲ್ಲ) ವೈಯುಕ್ತಿಕವಾಗಿಯಾಗಲಿ ಅಥವಾ ಏಜೆಂಟನ ಮೂಲಕವಾಗಿಯಾಗಲಿ ಪುರೋಭಿವೃದ್ಧಿ ವಂತಿಗೆ ಅಧಿಕಾರಿಯ ಮುಂದೆ ಹಾಜರಾಗುವಂತೆ ಮತ್ತು,-

(ಎ) ಅವರು,-

(i) ನೀರಾವರಿ ಕಾಮಗಾರಿಯ ಅಚ್ಚುಕಟ್ಟಿನಲ್ಲಿ ನೀರಾವರಿಗೊಳಪಡುವ ಜಮೀನುಗಳೆಂದು ಜಮೀನುಗಳ ವಿವರಣೆಯಲ್ಲಿ ಸೇರಿಸಿದುದಕ್ಕೆ;

(ii) ನೀರಾವರಿಗೊಳಪಡುವ ಯಾವುದೇ ನಿರ್ದಿಷ್ಟ ಸ್ವರೂಪದ ಅಥವಾ ವ್ಯಾಪ್ತಿಯ ಜಮೀನುಗಳೆಂದು ಜಮೀನುಗಳನ್ನು ವಿವರಣೆಯಲ್ಲಿ ಸೇರಿಸಿದುದಕ್ಕೆ

- ತಮ್ಮ ಆಕ್ಷೇಪಣೆಗಳನ್ನು ತಿಳಿಸುವಂತೆ; ಮತ್ತು

(ಬಿ) ಪುರೋಭಿವೃದ್ಧಿ ವಂತಿಗೆಗಳನ್ನು ಸಂದಾಯ ಮಾಡುವಾಗ, ಲೆಕ್ಕ ಹಾಕಲಾದ ಪುರೋಭಿವೃದ್ಧಿ ವಂತಿಗೆಯ ಮೊಬಲಗನ್ನು ಯಾವ ಆಧಾರದ ಮೇಲೆ ಕ್ಲೇಮು ಮಾಡಲಾಗಿದೆ ಎಂಬುದನ್ನು ತಿಳಿಸುವಂತೆ

- ಅಗತ್ಯಪಡಿಸತಕ್ಕದ್ದು,

ಅವನಾಗಲಿ ಅಥವಾ ಅವನ ಏಜೆಂಟನಾಗಲಿ ಅಂಥ ಲಿಖಿತ ವಿವರಣೆಯನ್ನು ಸಲ್ಲಿಸತಕ್ಕದ್ದು ಮತ್ತು ಅದಕ್ಕೆ ಸಹಿ ಮಾಡತಕ್ಕದ್ದು.

[1][(4) ಪುರೋಭಿವೃದ್ಧಿ ವಂತಿಗೆ ಅಧಿಕಾರಿಯು, [2][ಕರ್ನಾಟಕ][2] ಭೂ-ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) 30ನೇ ಪ್ರಕರಣದಲ್ಲಿ ನೋಟೀಸುಗಳನ್ನು ಉಪಬಂಧಿಸಲಾದ ರೀತಿಯಲ್ಲಿಯೇ ಭೂ ಹಿಡುವಳಿದಾರನಿಗೆ ನೋಟೀಸನ್ನು ಜಾರಿ ಮಾಡತಕ್ಕದ್ದು.][1]

1. 1974ರ ಅಧಿನಿಯಮ 29 ರ ಮೂಲಕ 22.06.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(5) (3)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದ ದಿನಾಂಕದಂದು ಅಥವಾ ವಿಚಾರಣೆಯನ್ನು ಮುಂದೂಡಬಹುದಾದ ದಿನಾಂಕದಂದು, ಪುರೋಭಿವೃದ್ಧಿ ವಂತಿಗೆ ಅಧಿಕಾರಿಯು, [1][ಕರ್ನಾಟಕ][1] ಭೂ-ಕಂದಾಯ ಅಧಿನಿಯಮ, 1964ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ವಿಧ್ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ಒಂದು ವಿವರಣ ಪತ್ರವನ್ನು ಸಲ್ಲಿಸಿದ ಪ್ರತಿಯೊಬ್ಬ ವ್ಯಕ್ತಿಗೂ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ,-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ನೀರಾವರಿ ಕಾಮಗಾರಿಯ ನಿರ್ಮಾಣ, ಜೀರ್ಣೋದ್ಧಾರ, ವಿಸ್ತರಣೆ ಅಥವಾ ಬದಲಾವಣೆಯು ಪೂರ್ಣಗೊಂಡ ಮೇಲೆ ಜಮೀನಿನ ಮೌಲ್ಯದಲ್ಲಿ ಉಂಟಾದ ಹೆಚ್ಚಳವನ್ನು;

(ಬಿ) ಸದರಿ ಜಮೀನಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ವಂತಿಗೆಯ ಮೊಬಲಗನ್ನು; ಮತ್ತು

(ಸಿ) ಅಂಥ ಪುರೋಭಿವೃದ್ಧಿ ವಂತಿಗೆಯನ್ನು ಸಂದಾಯ ಮಾಡಬೇಕಾದ ದಿನಾಂಕವನ್ನು

– ನಿರ್ದಿಷ್ಟಪಡಿಸಿ ಒಂದು ಆದೇಶವನ್ನು ಮಾಡತಕ್ಕದ್ದು.

(6) ಸರ್ಕಾರವು ಅಥವಾ (5)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ ಜಮೀನು ಇರುವ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಪೀಲಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡತಕ್ಕದ್ದು.

(7) (6)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಒಂದು ಅಪೀಲಿನ ಮೇಲೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವು ಮಾಡಿದ ಯಾವುದೇ ಆದೇಶಕ್ಕೆ ಮತ್ತು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಮೇಲ್ಕಂಡ ಆದೇಶಕ್ಕೆ ಒಳಪಟ್ಟು, (5)ನೇ ಉಪಪ್ರಕರಣದ ಅಡಿಯಲ್ಲಿನ ಪುರೋಭಿವೃದ್ಧಿ ವಂತಿಗೆ ಅಧಿಕಾರಿಯ ಆದೇಶವು ಅಂತಿಮವಾಗಿರತಕ್ಕದ್ದು, ಮತ್ತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಬದ್ಧವಾಗಿರತಕ್ಕದ್ದಲ್ಲ.][1]

5. ವಂತಿಗೆಯು ಸಂದಾಯವಾಗಬೇಕಾದ ಸಮಯ.– (1) [1][4ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿನ ನೋಟೀಸನ್ನು ಜಾರಿ ಮಾಡುವ ರೀತಿಯಲ್ಲಿಯೇ,][1] ಭೂ ಹಿಡುವಳಿದಾರನ ಮೇಲೆ [2][ಪುರೋಭಿವೃದ್ಧಿ ವಂತಿಗೆ ಅಧಿಕಾರಿಯು][2] ಜಾರಿ ಮಾಡಬೇಕಾದ ಲಿಖಿತ ತಗಾದೆ ನೋಟೀಸಿನ ಜಾರಿಯ ಮೇಲೆ, ಈ ಅಧಿನಿಯಮದ ಅಡಿಯಲ್ಲಿನ [2][ಆ [3][ವಂತಿಗೆಯು][3]][2] ಸಂದಾಯ ಮಾಡಬಹುದಾಗಿರತಕ್ಕದ್ದು:

1. 1974ರ ಅಧಿನಿಯಮ 29 ರ ಮೂಲಕ 22.06.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1964ರ ಅಧಿನಿಯಮ 8ರ ಮೂಲಕ 31.10.1957ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, 4ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವು ಅಂತಿಮಗೊಳ್ಳದೆ ಯಾವುದೇ ತಗಾದೆ ನೋಟೀಸನ್ನು ಭೂ ಹಿಡುವಳಿದಾರನಿಗೆ ಜಾರಿ ಮಾಡತಕ್ಕದ್ದಲ್ಲ.][1]

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಸಂದೇಹಗಳನ್ನು ತೊಡೆಯಲು ಜಮೀನಿನಲ್ಲಿ ಹಿತಾಸಕ್ತಿ ಹೊಂದಿರುವ ಭೂ ಹಿಡುವಳಿದಾರನಲ್ಲದ ಅಥವಾ ಆ ಜಮೀನಿನಲ್ಲಿ ಹಿತಾಸಕ್ತಿ ಹೊಂದಿರುವವನಲ್ಲದ ಅಥವಾ ಭೂ ಹಿಡುವಳಿದಾರನ ಹಿತಾಸಕ್ತಿಯಲ್ಲಿ ಉತ್ತರಾಧಿಕಾರ ಹೊಂದಿಲ್ಲದ ಯಾರೇ ವ್ಯಕ್ತಿಯ ಮೇಲೆ ಅಥವಾ [1][ವಂತಿಗೆಯ][1] ಯಾವುದೇ ಕಂತಿಗೆ ಸಂಬಂಧಿಸಿದಂತೆ ನೋಟೀಸನ್ನು ಜಾರಿ ಮಾಡುವುದು ಅವಶ್ಯಕವಾಗಿರತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) xxx][1]

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

6. ವಂತಿಗೆ ಸಂದಾಯದ ವಿಧಾನ.– (1) ಯಾವುದೇ ಜಮೀನಿನ ಸಂಬಂಧವಾಗಿ ಯಾವುದೇ [1][ವಂತಿಗೆಯನ್ನು][1] ಸಂದಾಯ ಮಾಡಬೇಕಾಗಿರುವ ಭೂ ಹಿಡುವಳಿದಾರನು [1][ವಂತಿಗೆಯ][1] ಮೊತ್ತಕ್ಕೆ ಸಮನಾದ ಮೌಲ್ಯವಿರುವ ತನ್ನ ಜಮೀನಿನ ಒಂದು ಭಾಗವನ್ನು ಸರ್ಕಾರಕ್ಕೆ ಒಪ್ಪಿಸುವ ಮೂಲಕವಾಗಲಿ ಅಥವಾ ನಗದು ರೂಪದಲ್ಲಾಗಲಿ ಅಥವಾ ಭಾಗಶಃ ಜಮೀನನ್ನು ಅಧ್ಯರ್ಪಣ ಮಾಡುವ ಮೂಲಕವಾಗಲಿ ಮತ್ತು ಭಾಗಶಃ ನಗದನ್ನು ನೀಡುವ ಮೂಲಕವಾಗಲಿ ನಿಯಮಿಸಲಾದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಜಮೀನನ್ನು ಪೂರ್ಣವಾಗಿ ಅಥವಾ ಭಾಗಶಃ ಆಗಿ ಒಪ್ಪಿಸುವ ಮೂಲಕ [1][ವಂತಿಗೆಯ][1] ಸಂದಾಯ ಮಾಡುವುದನ್ನು ಭೂ ಹಿಡುವಳಿದಾರನು ಆಯ್ಕೆ ಮಾಡಿಕೊಂಡಲ್ಲಿ, ಹಾಗೆ ಒಪ್ಪಿಸುವಿಕೆಯು, ಈ ಕೆಳಕಂಡ ಷರತ್ತುಗಳಿಗೊಳಪಟ್ಟಿರತಕ್ಕದ್ದು,–

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [1][ವಂತಿಗೆಯನ್ನು][1] ಸಂದಾಯ ಮಾಡುವ ಉದ್ದೇಶಕ್ಕಾಗಿ, ಒಪ್ಪಿಸಬೇಕೆಂದು ಇರುವ ಜಮೀನಿನ ಮೌಲ್ಯವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ [2][ಜಿಲ್ಲಾಧಿಕಾರಿಯು][2] ನಿರ್ಧರಿಸತಕ್ಕದ್ದು;

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಜಮೀನಿನ ಮಾಲೀಕನು, ಆ ಜಮೀನು ಎಲ್ಲ ಋಣಭಾರಗಳಿಂದ ಮುಕ್ತವಾಗಿದೆ ಎಂದು [1][ಜಿಲ್ಲಾಧಿಕಾರಿಗೆ][1] ಮನದಟ್ಟಾಗುವಂತೆ ರುಜುವಾತುಪಡಿಸತಕ್ಕದ್ದು. [1][ಜಿಲ್ಲಾಧಿಕಾರಿಯು][1], ಉದ್ದೇಶಿತ ಅಧ್ಯರ್ಪಣವನ್ನು ಅಧಿಸೂಚಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಸಮಯದ ಒಳಗೆ ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು; ಯಾವುದೇ ಆಕ್ಷೇಪಣೆಯನ್ನು ಸ್ವೀಕರಿಸಿದ

[1][ಜಿಲ್ಲಾಧಿಕಾರಿಗೆ][1] ಆ ಜಮೀನು ಋಣಭಾರದಿಂದ ಮುಕ್ತವಾಗಿಲ್ಲವೆಂದು ಮನದಟ್ಟಾದರೆ, ಅವನು ಅಧ್ಯರ್ಪಣೆಯ ಸ್ವೀಕಾರವನ್ನು ತಿರಸ್ಕರಿಸತಕ್ಕದ್ದು ಮತ್ತು ವಂತಿಗೆಯನ್ನು ನಗದು ರೂಪದಲ್ಲಿ ವಸೂಲಿ ಮಾಡತಕ್ಕದ್ದು; ಯಾವುದೇ ಆಕ್ಷೇಪಣೆಯನ್ನು ಸ್ವೀಕರಿಸದಿದ್ದರೆ ಮತ್ತು [1][ಜಿಲ್ಲಾಧಿಕಾರಿಗೆ][1] ಆ ಜಮೀನು ಋಣಭಾರಗಳಿಂದ ಮುಕ್ತವಾಗಿದೆ ಎಂದು ಮನದಟ್ಟಾದರೆ, ಅವರು, ಒಪ್ಪಿಸುವಿಕೆಯನ್ನು ಲಿಖಿತ ಆದೇಶದ ಮೂಲಕ ಅಂಗೀಕರಿಸತಕ್ಕದ್ದು. ಮತ್ತು ಹಾಗೆ ಅಂಗೀಕರಿಸಿದ ತರುವಾಯ ಜಮೀನು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಸರ್ಕಾರವು ತನಗೆ ಸೂಕ್ತವೆನಿಸಬಹುದಾದಂಥ ರೀತಿಯಲ್ಲಿ ಅದನ್ನು ವಿಲೆ ಮಾಡಬಹುದು:

ಪರಂತು, [1][ಜಿಲ್ಲಾಧಿಕಾರಿಯು][1] ಜಮೀನಿನ ಸ್ಥಳವು ಪ್ರವೇಶಕ್ಕೆ ಸುಲಭ ಸಾಧ್ಯವಿಲ್ಲವೆಂಬ ಅಥವಾ ಅನುಕೂಲಕರವಾಗಿಲ್ಲ ಎಂಬ ಅಥವಾ ನಿಯಮಿಸಬಹುದಾದಂಥ ಇತರ ಕಾರಣಗಳ ಮೇಲೆ ಅಧ್ಯರ್ಪಣವನ್ನು ಅಂಗೀಕರಿಸಲು ತಿರಸ್ಕರಿಸಬಹುದು.

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಸರ್ಕಾರವು, ಯಾವುದೇ ಕಾಮಗಾರಿಯ ಅಥವಾ ಪ್ರಕರಣಗಳ ವರ್ಗದ ಸಂಬಂಧದಲ್ಲಿ, [1][ವಂತಿಗೆಯನ್ನು][1] ನಗದು ರೂಪದಲ್ಲಿ ಮಾತ್ರವೇ ಸಂದಾಯ ಮಾಡತಕ್ಕದ್ದೆಂದು ಮತ್ತು ಜಮೀನನ್ನು ಅಧ್ಯರ್ಪಣ ಮಾಡುವ ಮೂಲಕ ಅಲ್ಲವೆಂದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದು.

(4) [1][ವಂತಿಗೆಯನ್ನು][1] ನಗದು ರೂಪದಲ್ಲಿ ಸಂದಾಯ ಮಾಡಬೇಕಾಗಿರುವಲ್ಲಿ, ಅದನ್ನು ಇಪ್ಪತ್ತು ವಾರ್ಷಿಕ ಕಂತುಗಳನ್ನು ಮೀರದಂತೆ ಮತ್ತು ನಿಯಮಿಸಬಹುದಾದಂಥ ಅವಧಿಯಲ್ಲಿ ಸಂದಾಯ ಮಾಡತಕ್ಕದ್ದು:

ಪರಂತು, ಮೊದಲ ಕಂತನ್ನು ಸಂದಾಯ ಮಾಡುವ ದಿನದಂದು ಅಥವಾ ಅದಕ್ಕೂ ಮೊದಲು ಅಥವಾ ಆ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗಿನ ಯಾವುದೇ ತದನಂತರದ ದಿನಾಂಕದಂದು, ಮಾಲೀಕನು ಪೂರ್ಣ [1][ವಂತಿಗೆಯನ್ನು][1] ಅಥವಾ ಸಂದರ್ಭಾನುಸಾರ, [1][ವಂತಿಗೆಯ][1] ಬಾಕಿ ಮೊಬಲಗನ್ನು ಸಂದಾಯ ಮಾಡಿದರೆ, ಅವನು [1][ವಂತಿಗೆ][1] ಅಥವಾ ಸಂದರ್ಭಾನುಸಾರ ಅಂಥ [1][ವಂತಿಗೆಯ][1] ಬಾಕಿ ಮೊಬಲಗಿನ ಶೇಕಡಾ 10 ರಷ್ಟು ರಿಯಾಯಿತಿಗೆ ಹಕ್ಕುಳ್ಳವನಾಗಿರತಕ್ಕದ್ದು:

ಮತ್ತೂ ಪರಂತು, [1][ವಂತಿಗೆಯ][1] ಮೊತ್ತವು ಬಾಕಿಯಾಗುತ್ತಾ ಹೋದರೆ, ಅಂಥ ಬಾಕಿ ಮೊತ್ತದ ಮೇಲೆ, ನಿಯಮಿಸಲಾದ ದರದ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

1. 1966ರ ಅಧಿನಿಯಮ 13ರ ಮೂಲಕ 1.9.1960ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

7. ವಂತಿಗೆಯನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವುದು.– ಯಾವುದೇ ಜಮೀನಿನ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ವಂತಿಗೆಯನ್ನು, ಸದರಿ ಜಮೀನಿನ ಮೇಲಿನ ಕಂದಾಯ ತಗಾದೆಯ ಬಾಕಿ ಎಂದು ಪರಿಗಣಿಸತಕ್ಕದ್ದು ಮತ್ತು ಆ ಜಮೀನು, ಅದರ ಉತ್ಪನ್ನಗಳು ಮತ್ತು ಜಮೀನಿನ ಮೇಲೆ ಇರುವ ಕಟ್ಟಡವನ್ನು (ಭೂಮಾಲೀಕನ ಒಡೆತನ ಹೊಂದಿರುವ) ವಂತಿಗೆಯ ಭದ್ರತೆ ಎಂದು ಪರಿಗಣಿಸತಕ್ಕದ್ದು. ಯಾವುದೇ ವರ್ಷದಲ್ಲಿ ಸಂದಾಯ ಮಾಡಬೇಕಾದ ಯಾವುದೇ ವಂತಿಗೆಯ ಯಾವುದೇ ಕಂತನ್ನು ಸಂದಾಯ ಮಾಡಬೇಕಾದ ದಿನಾಂಕದಂದು ಸಂದಾಯ ಮಾಡದಿದ್ದರೆ, ಕಂತಿನ ಮೊತ್ತವನ್ನು ಭೂ ಕಂದಾಯದ ಬಾಕಿ ಎಂದು ಪರಿಗಣಿಸತಕ್ಕದ್ದು ಮತ್ತು ಜಾರಿಯಲ್ಲಿರುವ ಭೂ ಕಂದಾಯದ ವಸೂಲಿಯನ್ನು ವಿನಿಯಮಿಸುವ ಕಾನೂನಿನ ಉಪಬಂಧಗಳು, ಆ ಜಮೀನಿನ ಭೂ ಕಂದಾಯವನ್ನು ವಸೂಲಿ ಮಾಡುವುದಕ್ಕೆ ಅನ್ವಯವಾಗುವಂತೆಯೇ ಆ ಬಾಕಿಯ ಮತ್ತು ಆ ಬಾಕಿಯ ಮೇಲಣ ಬಡ್ಡಿಯ ವಸೂಲಿಗೂ ಅನ್ವಯವಾಗತಕ್ಕದ್ದು.

8. ಜಮೀನಿನಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯಿಂದ ವಂತಿಗೆಯ ಸಂದಾಯ.– ಒಂದು ಜಮೀನಿನಲ್ಲಿ ಹಿತಾಸಕ್ತಿ ಹೊಂದಿರುವ ಅಂಥ ಜಮೀನಿನ ಆ ಯಾರೇ ವ್ಯಕ್ತಿಯು, ಭೂ ಹಿಡುವಳಿದಾರನಾಗಿರದಿದ್ದಾಗ್ಯೂ, ಅಂಥ ಜಮೀನಿನ ಹಿಡುವಳಿದಾರನು ಸಂದಾಯ ಮಾಡಬೇಕಾಗಿದ್ದ ವಂತಿಗೆಯನ್ನು ಸಂದಾಯ ಮಾಡಬಹುದು ಮತ್ತು ಭೂ ಹಿಡುವಳಿದಾರನು ವಂತಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಆ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಅಂಥ ವ್ಯಕ್ತಿಯು ಪೂರ್ತಿ ವಂತಿಗೆಯನ್ನು ಸಂದಾಯ ಮಾಡಿದರೆ ಅವನು ಶೇಕಡಾ ಹತ್ತರ ರಿಯಾಯಿತಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

9. ವಂತಿಗೆಗೆ ಸಂಬಂಧಿಸಿದ ಹಣ ತುಂಬಿಕೊಡುವ ಹಕ್ಕು.– ಈ ಅಧಿನಿಯಮದ ಅಡಿಯಲ್ಲಿ ವಂತಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಭೂ ಹಿಡುವಳಿದಾರನು (ದಕ್ಷಿಣ ಕನ್ನಡ ಜಿಲ್ಲೆಯ ಒಳವರ್ಗದಾರ, ಖಾಯಂ ಗೇಣಿದಾರ, ಖಾಯಂ ಬಾಡಿಗೆದಾರ ಅಥವಾ ಮೂಲ ಗೇಣಿದಾರನಲ್ಲದ) ಜಮೀನಿನ ಮಾಲೀಕನಾಗಿರದಿದ್ದಲ್ಲಿ ಅಥವಾ ಜಮೀನಿನ ಸಹ ಮಾಲೀಕನಾಗಿದ್ದಲ್ಲಿ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಮಾಲೀಕನಿಂದ ಹಣ ತುಂಬಿ ಕೊಡುವ ಅಥವಾ ಸಂದರ್ಭಾನುಸಾರ, ಸಹ ಮಾಲೀಕನಿಂದ ಪ್ರಮಾಣಾನುಸಾರ ಭಾಗದ ವಸೂಲಿ ಮಾಡುವ ಅವನ ಹಕ್ಕಿಗೆ ಬಾಧಕವಾಗುತ್ತದೆಂದು ಭಾವಿಸತಕ್ಕದ್ದಲ್ಲ.

10. ನೀರು ದರ ವಿಧಿಸುವಿಕೆ.–

(1) [1][(ಎ) xxx][1]

1. 1965ರ ಅಧಿನಿಯಮ 18 ರ ಮೂಲಕ 11.11.1965ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) ಸರ್ಕಾರಕ್ಕೆ ಸೇರಿದ ಅಥವಾ ಸರ್ಕಾರದಿಂದ ಅಥವಾ ಸರ್ಕಾರದ ಪರವಾಗಿ ನಿರ್ಮಿಸಿದ ಯಾವುದೇ ಕಾಮಗಾರಿಯಿಂದ [1][ನೀರನ್ನು ಪೂರೈಸಿದಾಗಲೆಲ್ಲ ಅಥವಾ ಲಭ್ಯವಾಗುವಂತೆ ಮಾಡಿದಾಗಲೆಲ್ಲ ಅಥವಾ ನೀರಾವರಿ ಉದ್ದೇಶಕ್ಕಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಬಳಸಿದಾಗಲೆಲ್ಲ][1]; ಮತ್ತು

1. 1964ರಅಧಿನಿಯಮ 8ರ ಮೂಲಕ 27.02.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಯಾವುದೇ ಕಾಮಗಾರಿಯಿಂದ ನೀರನ್ನು, ಪಕ್ಕದ ಜಮೀನಿನಿಂದ ಅಥವಾ ಅದರ ಮೂಲಕವಾಗಿ ನೇರವಾಗಿ ಹರಿಸುವ ಮೂಲಕ ಅಥವಾ ಬಸಿಯುವ ಮೂಲಕ ಅಥವಾ ನೇರವಾಗಿ ಹರಿಸದೆ ಅಥವಾ ಬಸಿಯದೆ ಅಥವಾ ಚರಂಡಿಯಿಂದ ಯಾವುದೇ ಸಾಗುವಳಿ ಜಮೀನನ್ನು ನೀರಾವರಿಗೊಳಪಡಿಸಿದಾಗ ಅಥವಾ ಜಲಾಶಯಕ್ಕೆ ಹರಿಸಿ, ಆ ತರುವಾಯ, ನೀರನ್ನು ನೆರೆಯ ಜಮೀನಿನಿಂದ ಅಥವಾ ಅದರ ಮೂಲಕ ನೇರವಾಗಿ ಹರಿಸುವ ಮೂಲಕ ಅಥವಾ ಬಸಿಯುವ ಮೂಲಕ ಅಥವಾ ನೇರವಾಗಿ ಹರಿಸದೆ ಅಥವಾ ಬಸಿಯದೆ ಅಥವಾ ಚರಂಡಿಯಿಂದ ಯಾವುದೇ ಸಾಗುವಳಿ ಜಮೀನನ್ನು ನೀರಾವರಿಗೊಳಪಡಿಸಿದಾಗ ಮತ್ತು ಅಂಥ ನೀರಾವರಿಯು, ಅಂಥ ಜಮೀನಿನ ಮೇಲೆ ನಿಂತಿರುವ ಬೆಳೆಗೆ ಪ್ರಯೋಜನಕಾರಿಯಾದುದೆಂದು ಮತ್ತು ಅದರ ಅಗತ್ಯತೆಗೆ ಸಾಕಷ್ಟೆಂದು [1][ಜಿಲ್ಲಾಧಿಕಾರಿಯು][1] ಅಭಿಪ್ರಾಯ ಪಟ್ಟಲ್ಲಿ;

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಡಿ) ಆಂಧ್ರ ರಾಜ್ಯ ಅಧಿನಿಯಮ, 1953ರ 66ನೇಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಪ್ರಾಧಿಕಾರದಿಂದ ಸರ್ಕಾರಕ್ಕೆ ಪೂರೈಸಲಾದ ಅಥವಾ ಲಭ್ಯವಾಗುವಂತೆ ಮಾಡಲಾದ ನೀರನ್ನು ನೀರಾವರಿ ಉದ್ದೇಶಗಳಿಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಪೂರೈಸಿದಾಗ, ಲಭ್ಯವಾಗುವಂತೆ ಮಾಡಿದಾಗ ಅಥವಾ ಬಳಸಿದಾಗ][1]

1. 1964ರ ಅಧಿನಿಯಮ 8 ರ ಮೂಲಕ 27.2.1964ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

– ಸರ್ಕಾರವು ಅಂಥ ನೀರಿಗೆ ಸಂಬಂಧಿಸಿದಂತೆ, (ಇದರಲ್ಲಿ ಇನ್ನು ಮುಂದೆ ನೀರಿನ ದರ ಎಂದು ಉಲ್ಲೇಖಿಸಿರುವ) ಪ್ರತ್ಯೇಕ ಫೀಜನ್ನು ವಿಧಿಸಲು ಹಕ್ಕುಳ್ಳದ್ದಾಗಿರತಕ್ಕದ್ದು. ಮತ್ತು [1][ಸರ್ಕಾರವು ಅಂಥ ನೀರು ದರಗಳನ್ನು ಯಾವ ದರದಲ್ಲಿ ವಸೂಲು ಮಾಡತಕ್ಕದೆಂದು ನಿಯಮಿಸಬಹುದು, ಅವು,–

(i) ವಿವಿಧ ಉದ್ದೇಶಗಳಿಗಾಗಿ ಪೂರೈಸಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿಗೆ ಬೇರೆ ಬೇರೆ ದರಗಳಾಗಿರಬಹುದು;][1]

1. 1964ರ ಅಧಿನಿಯಮ 8 ರ ಮೂಲಕ 27.2.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ii) ವಿವಿಧ ನೀರಾವರಿ ಕಾಮಗಾರಿಗಳಿಂದ ಪೂರೈಸಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿಗೆ ಬೇರೆ ಬೇರೆ ದರಗಳಾಗಿರಬಹುದು, ಮತ್ತು ಅಂಥ ಜಮೀನಿನ ಮೇಲೆ ಬೆಳೆದ ಬೆಳೆ ಅಥವಾ ಬೆಳೆಗಳ ಬಗ್ಗೆ ಅಥವಾ ಬೆಳೆಯಬಹುದಾದ ಬೆಳೆಯ ಬಗ್ಗೆ ಯಾವುದೇ ಉಲ್ಲೇಖವಿದ್ದರೂ ಅಥವಾ ಇಲ್ಲದಿದ್ದರೂ ಯಾವುದೇ ಜಮೀನನ್ನು ನೀರಾವರಿಗೆ ಒಳಪಡಿಸಲು ನೀರನ್ನು ಪೂರೈಸಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿಗೆ ಬೇರೆ ಬೇರೆ ದರಗಳಾಗಿರಬಹುದು;][1]

1. 1965ರ ಅಧಿನಿಯಮ 18 ರ ಮೂಲಕ 11.11.1965ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಯಾವುದೇ ಇತರ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಬೇಕಾದ ನೀರಿನ ದರ ಯಾವುದಾದರೂ ಇದ್ದರೆ, ಆ ದರವಾಗಿರಬಹುದು. ನೀರು ದರದ ಮೊತ್ತ ವಿಧಿಸುವುದನ್ನು ನಿರ್ಧರಿಸತಕ್ಕ ರೀತಿ ಮತ್ತು ವಿಧಿಸತಕ್ಕ ಪ್ರಾಧಿಕಾರ

– ಮತ್ತು ಸರ್ಕಾರವು, ಯಾವ ರೀತಿಯಲ್ಲಿ ಮತ್ತು ಯಾವ ಪ್ರಾಧಿಕಾರದ ಮೂಲಕ ನೀರಿನ ದರದ ಮೊಬಲಗನ್ನು ವಿಧಿಸಬಹುದು ಎಂಬುದನ್ನು ನಿರ್ಧರಿಸತಕ್ಕದ್ದು:

[1][ಪರಂತುಕ xxx][1]

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಪರಂತು, ಯಾವುದಾದರೂ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ [2][ಅಥವಾ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ][2] (ಇನ್ನು ಮುಂದೆ ನಿಗಮವೆಂದು ಕರೆಯಲಾದ) ಅಥವಾ ಅದರ ಪರವಾಗಿ ಯಾವುದೇ ನೀರಾವರಿ ಕಾಮಗಾರಿಯಿಂದ ನೀರನ್ನು ಪೂರೈಸಿದರೆ ಅಥವಾ ಲಭ್ಯವಾಗುವಂತೆ ಮಾಡಿದರೆ, ಅಂಥ ಪ್ರದೇಶ ಅಥವಾ ಪ್ರದೇಶಗಳಲ್ಲಿ ಸದರಿ ನಿಗಮವು ನೀರು ದರಗಳನ್ನು ವಿಧಿಸತಕ್ಕದ್ದು ಮತ್ತು ವಸೂಲಿ ಮಾಡತಕ್ಕದ್ದು.][1]

1. 1995ರ ಅಧಿನಿಯಮ 21 ರ ಮೂಲಕ 1.7.1997 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.
2. 2002ರ ಅಧಿನಿಯಮ 8ರ ಮೂಲಕ 13.11.2001ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(1ಎ) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನೀರಾವರಿ ಉದ್ದೇಶಗಳಿಗಾಗಿ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ (1959 ರ ಕರ್ನಾಟಕ ಅಧಿನಿಯಮ 11) ನೋಂದಣಿಯಾದ ನೀರು ಬಳಕೆದಾರರ ಸಂಘಗಳಿಗೆ [2][ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) ಅಡಿಯಲ್ಲಿ ನೋಂದಣಿಯಾದ ನೀರು ಬಳಕೆದಾರರ ಅಸೋಸಿಯೇಷನ್‌ಗಳಿಗೆ][2] [3][ಸರ್ಕಾರ ಅಥವಾ ಸಂದರ್ಭಾನುಸಾರ, ನಿಗಮವು ನೀರನ್ನು ಪೂರೈಸಬಹುದು][3] ಅಥವಾ ಲಭ್ಯವಾಗುವಂತೆ ಮಾಡಬಹುದು. ನೀರಿನ ದರವನ್ನು, [4][XXX][4] [3][ಸರ್ಕಾರ ಅಥವಾ ಸಂದರ್ಭಾನುಸಾರ, ನಿಗಮವು ವಿಧಿಸತಕ್ಕದ್ದು][2] ಮತ್ತು ಪರಿಮಾಣದ ಆಧಾರದ ಮೇಲೆ ಅಂಥ ಸಂಘಗಳಿಂದ [2][ಅಥವಾ ಅಂಥ ಅಸೋಸಿಯೇಷನ್‌ಗಳಿಂದ][2] ವಸೂಲು ಮಾಡತಕ್ಕದ್ದು. ಸರ್ಕಾರವು ಅಂಥ ನೀರಿನ ದರಗಳನ್ನು ಯಾವ ದರದಲ್ಲಿ ವಿಧಿಸತಕ್ಕದ್ದೆಂದು ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಪ್ರಾಧಿಕಾರವು ವಸೂಲು ಮಾಡತಕ್ಕದ್ದೆಂದು ನಿರ್ಧರಿಸತಕ್ಕದ್ದು. ಅಂಥ ಸಂಘಗಳು [2][ಅಥವಾ ಅಂಥ ಅಸೋಸಿಯೇಷನ್‌ಗಳು][2] ರೈತರಿಗೆ ನೀರನ್ನು ಪೂರೈಕೆ ಮಾಡಬಹುದು ಮತ್ತು ಅಂಥ ಪ್ರತಿಯೊಬ್ಬ ರೈತನಿಂದ ನೀರು ದರಗಳನ್ನು ವಸೂಲು ಮಾಡಬಹುದು.

1. 1995ರ ಅಧಿನಿಯಮ 16 ರ ಮೂಲಕ 16.5.1995ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2002ರ ಅಧಿನಿಯಮ 9 ರ ಮೂಲಕ 25 .02.2002ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1995ರ ಅಧಿನಿಯಮ 21ರ ಮೂಲಕ 01.07.1997ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2000ದ ಅಧಿನಿಯಮ 24 ರ ಮೂಲಕ 14.6.2000 ದಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(1ಬಿ) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರಲ್ಲಿ (1959ರ ಕರ್ನಾಟಕ ಅಧಿನಿಯಮ 11) [1][ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಲ್ಲಿ (1960ರ ಕರ್ನಾಟಕ ಅಧಿನಿಯಮ 17)][1] ಏನೇ ಇದ್ದಾಗ್ಯೂ, [2][xxx][2] ಸರ್ಕಾರವು, ನೀರಿನ ನ್ಯಾಯಸಮ್ಮತ ವಿತರಣೆಯನ್ನು ಮತ್ತು [3][ನೀರು ದರಗಳ][3] ಸಮರ್ಥ ವಸೂಲಾತಿಯನ್ನು ಖಚಿತಪಡಿಸಲು, (1ಎ) ಉಪ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡಬಹುದು. ಅವುಗಳಿಗೆ ನೀರು ಬಳಕೆದಾರ ಸಂಘಗಳು [1][ಅಥವಾ ಸಂದರ್ಭಾನುಸಾರ ನೀರು ಬಳಕೆದಾರರ ಅಸೋಸಿಯೇಷನ್‌ಗಳು][1] ಬದ್ಧವಾಗಿರತಕ್ಕದ್ದು.][1].

1. 2002ರ ಅಧಿನಿಯಮ 9 ರ ಮೂಲಕ 25 .02.2002ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2000ದ ಅಧಿನಿಯಮ 24 ರ ಮೂಲಕ 14.6.2000 ದಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 2000ದ ಅಧಿನಿಯಮ 24 ರ ಮೂಲಕ 14.6.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) [xxx][1]

1. 1964ರ ಅಧಿನಿಯಮ 8 ರ ಮೂಲಕ 27.2.1964ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ನೀರು ದರ [1][ಅಥವಾ ಸಂದರ್ಭಾನುಸಾರ, ನೀರು ಚಾರ್ಜಿನ][1] ಮೊತ್ತವನ್ನು ಜಮೀನಿನ ಸಂಬಂಧದಲ್ಲಿ ಭೂ ಕಂದಾಯದ ಬಾಕಿಯನ್ನು ವಸೂಲು ಮಾಡುವಂಥ ರೀತಿಯಲ್ಲಿಯೇ ವಸೂಲಿ ಮಾಡತಕ್ಕದ್ದು.

1. 2000ದ ಅಧಿನಿಯಮ 24ರ ಮೂಲಕ 14.6.2000ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**10ಎ. ಈ ಅಧಿನಿಯಮವನ್ನು ತುಂಗಭದ್ರಾ ಯೋಜನೆಗೆ ಅನ್ವಯಿಸುವುದು.–** ನೀರಿನ ದರ ವಿಧಿಸುವುದಕ್ಕೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಆಂಧ್ರ ರಾಜ್ಯ ಅಧಿನಿಯಮ, 1953ರ (1953ರ ಕೇಂದ್ರ ಅಧಿನಿಯಮ 30) 66ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಪ್ರಾಧಿಕಾರದಿಂದಾದ ನೀರಿನ ಯಾವುದೇ ಸಂಗ್ರಹಣೆ, ಬಳಕೆ, ವಿತರಣೆ ಅಥವಾ ಮಾರಾಟದ ಸಂಬಂಧದಲ್ಲಿಯೂ ಅನ್ವಯಿಸತಕ್ಕದ್ದು:

ಪರಂತು, ನೀರು ದರ ನಿಗದಿಗೆ ಮತ್ತು ಅಂಥ ನೀರು ದರಕ್ಕೆ ಸಂಬಂಧಿಸಿದ ಇತರ ಹಕ್ಕುಗಳ ಸಂಬಂಧದಲ್ಲಿ ಯಾವುದೇ ನಿಯಮ ಅಥವಾ ಆದೇಶವನ್ನು ಭಾರತದ ರಾಷ್ಟ್ರಪತಿಯ ಪೂರ್ವ ಸಮ್ಮತಿ ಇದ್ದ ಹೊರತು ಮಾಡತಕ್ಕದ್ದಲ್ಲ.][1]

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

11. ನಿಯಮ ರಚನಾಧಿಕಾರ.– (1) ರಾಜ್ಯ ಸರ್ಕಾರವು ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ, ನಿಯಮಗಳನ್ನು ರಚಿಸಬಹುದು; [1][ಮತ್ತು ಅಂಥ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ನಿಯಮಗಳು ಎಲ್ಲ ನೀರಾವರಿ ಕಾಮಗಾರಿಗಳಿಗೆ ಸಾಮಾನ್ಯವಾದುದಾಗಿರಬಹುದು ಅಥವಾ ಒಂದು ಅಥವಾ ಹೆಚ್ಚು ನೀರಾವರಿ ಕಾಮಗಾರಿಗಳಿಗೆ ವಿಶೇಷವಾದುದಾಗಿರಬಹುದು.][1]

1. 1961ರ ಅಧಿನಿಯಮ 23ರ ಮೂಲಕ 16.11.1961ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಲಾದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು, ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು,–

(ಎ) ಅಧಿಸೂಚಿಸಬಹುದಾದಂತೆ ಸರ್ಕಾರದ ಅಧಿಕಾರಗಳನ್ನು ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರಗಳಿಗೆ ವಹಿಸಿಕೊಡುವುದು;

(ಬಿ) ಹಾಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾದ ವಹಿಸಿಕೊಡಲಾದ ಪ್ರಾಧಿಕಾರವು ಹೊರಡಿಸಿದ ಅದೇಶಗಳಿಗೆ ಸಂಬಂಧಿಸಿದಂತೆ ಅಗತ್ಯವೆಂದು ಕಂಡು ಬರಬಹುದಾದಂಥ ಮೇಲ್ಮನವಿಗಳನ್ನು ಮತ್ತು ಪುನರೀಕ್ಷಣಾ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸುವುದು ; ಮತ್ತು

(ಸಿ) ನಿಯಮಿಸಬೇಕೆಂದು ಈ ಅಧಿನಿಯಮವು ಸ್ಪಷ್ಟವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ಎಲ್ಲ ವಿಷಯಗಳು.

[1][(3) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮದ ರಚನೆಗೆ ಇರುವ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಬೇಕಾದ ವಿವರಣೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು. (4)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಮಾರ್ಪಾಟಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವು, ಈ ಅಧಿನಿಯಮದ ಅಡಿಯಲ್ಲಿ ಅಧಿನಿಯಮಿತವಾದ ರೀತಿಯಲ್ಲಿಯೇ ಪರಿಣಾಮ ಹೊಂದಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ನಿಕಟ ತರುವಾಯದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.][1]

1. 1964ರ ಅಧಿನಿಯಮ 8ರ ಮೂಲಕ 27.02.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

12. ನಿರಸನ ಮತ್ತು ಉಳಿಸುವಿಕೆಗಳು.– ಮೈಸೂರು ನೀರಾವರಿ ಅಧಿನಿಯಮ, 1932ರ (1932ರ ಮೈಸೂರು ಅಧಿನಿಯಮ 1) ರ ಅಧ್ಯಾಯ III, ಮೈಸೂರು ಭೂ ಕಂದಾಯ ಸಂಹಿತೆ, 1888ರ (1888ರ ಮೈಸೂರು ಅಧಿನಿಯಮ IV) 53ನೇ ಪ್ರಕರಣ; ಮುಂಬಯಿ ಭೂ ಕಂದಾಯ ಸಂಹಿತೆ, 1879ರ (1879 ರ ಮುಂಬಯಿ ಅಧಿನಿಯಮ V) 55ನೇ ಪ್ರಕರಣ; ಹೈದರಾಬಾದ್ ಭೂ ಕಂದಾಯ ಅಧಿನಿಯಮ 1317 ಫಸಲಿ (1317ನೇ ಫಸಲಿ ಹೈದರಾಬಾದ್ ಅಧಿನಿಯಮ VIII)ರ 53ನೇ ಪ್ರಕರಣ; ಮುಂಬಯಿ ನೀರಾವರಿ ಅಧಿನಿಯಮ, 1879 (1879ರ ಮುಂಬಯಿ ಅಧಿನಿಯಮ VII)ರ 44, 48, 48ಎ, 49, 50, 51, 52, 53, 54, 55, 56, 56ಎ, 56ಬಿ, 56ಸಿ, 56ಡಿ, 56ಇ, ಮತ್ತು 56 ಎಫ್; ಮದರಾಸು ನೀರಾವರಿ ಅಧಿನಿಯಮ, 1955 (1955ರ ಮದರಾಸು ಅಧಿನಿಯಮ III); ಮದರಾಸು ನೀರಾವರಿ ಉಪಕರ ಅಧಿನಿಯಮ, 1865 (1865ರ ಮದರಾಸು ಅಧಿನಿಯಮ VII); ಹೈದರಾಬಾದ್ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ಫೀಜುಗಳ ಸೇರ್ಪಡೆ) ಅಧಿನಿಯಮ, 1952 (1952ರ ಹೈದರಾಬಾದ್ ಅಧಿನಿಯಮ V); ಮತ್ತು ಕೊಡಗು ನೀರಾವರಿ ಉಪಕರ ಅಧಿನಿಯಮ, 1943, (1943ರ ಕೊಡಗು ಅಧಿನಿಯಮ IV) – ಇವು ಈ ಮೂಲಕ ನಿರಸನಗೊಂಡಿವೆ:

ಪರಂತು, ಅಂಥ ನಿರಸನವು, ಈ ಮುಂದಿನವುಗಳಿಗೆ ಬಾಧಿಸತಕ್ಕದ್ದಲ್ಲ, ಎಂದರೆ, –

(i) ಸದರಿ ಉಪಬಂಧಗಳ ಹಿಂದಿನ ಯಾವುದೇ ಕಾರ್ಯಾಚರಣೆಯನ್ನು ಅಥವಾ ಅದರ ಅಡಿಯಲ್ಲಿ ಯುಕ್ತವಾಗಿ ಮಾಡಲಾದ ಯಾವುದೇ ಕೃತ್ಯವನ್ನು ಅಥವಾ ಅದರಿಂದಾದ ಯಾವುದೇ ಕಾರ್ಯವನ್ನು ; ಅಥವಾ

(ii) ಸದರಿ ಅಧಿನಿಯಮಿತಿಗಳ ಅಡಿಯಲ್ಲಿ ಆರ್ಜಿಸಿದ, ಕೂಡಿಬಂದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆ ; ಅಥವಾ

(iii) ಮೇಲೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾದ್ಯತೆ, ಹೊಣೆ ಅಥವಾ ಮಟ್ಟುಗೋಲು – ಇವಕ್ಕೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯ – ಇವನ್ನು ಈ ಅಧಿನಿಯಮವು ಜಾರಿಯಾಗಿಲ್ಲದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆಯನ್ನು, ಕಾನೂನು ವ್ಯವಹರಣೆಯನ್ನು, ಪರಿಹಾರೋಪಾಯವನ್ನು ಅಥವಾ ವಿಧಿಸಬಹುದಾದಂಥ ಯಾವುದೇ ಅಂಥ ಮುಟ್ಟುಗೋಲನ್ನು ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು:

ಮತ್ತೂ ಪರಂತು, ಪುರೋಭಿವೃದ್ಧಿ ವಂತಿಗೆಯನ್ನು ವಿಧಿಸುವುದಕ್ಕೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ನಿರಸಿತ ಅಧಿನಿಯಮದ ಅಡಿಯಲ್ಲಿ, ಈಗಾಗಲೇ ವಂತಿಗೆಯನ್ನು ಅಥವಾ ಪುರೋಭಿವೃದ್ಧಿ ಚಾರ್ಜುಗಳನ್ನು ವಿಧಿಸಲಾಗಿರುವ ಜಮೀನುಗಳಿಗೆ ಅನ್ವಯಿಸತಕ್ಕದ್ದಲ್ಲ ಮತ್ತು ಅಂಥ ವಂತಿಗೆ ಅಥವಾ ಪುರೋಭಿವೃದ್ಧಿ ಚಾರ್ಜುಗಳ ವಸೂಲಿಯನ್ನು ಈ ಅಧಿನಿಯಮವು ಜಾರಿಗೊಂಡಿಲ್ಲದಿದ್ದರೆ ಹೇಗೋ ಹಾಗೆ ಮುಂದುವರಿಸತಕ್ಕದ್ದು:

ಅಲ್ಲದೆ ಪರಂತು, ಯಾವುದೇ ನಿರಸಿತ ಅಧಿನಿಯಮದ ಅಡಿಯಲ್ಲಿ ಯಾವುದೇ ಜಮೀನಿಗೆ ಸಂಬಂಧಿಸಿದಂತೆ ವಿಧಿಸಿದ ನೀರು ದರ, ನೀರು ಕರಗಳು ಮತ್ತು ನೀರಾವರಿ ಕರಗಳನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೀರು ದರಗಳನ್ನು ವಿಧಿಸುವ ತನಕ ಹಾಗೆ ವಿಧಿಸುವುದು ಮುಂದುವರೆಯತಕ್ಕದ್ದು.

* * *

ಅಧಿಸೂಚನೆ

I

ಬೆಂಗಳೂರು, ದಿನಾಂಕ 20ನೇ ಆಗಸ್ಟ್ 1960 (ಶ್ರಾವಣ 29, ಶಕ ವರ್ಷ 1882)

[ಸಂಖ್ಯೆ ಪಿ ಡಬ್ಲ್ಯೂಡಿ 47 ಜಿಐ ಜಿ 59]

ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರು ದರ ವಿಧಿಸುವಿಕೆ) ಅಧಿನಿಯಮ, 1957ರ (1957ರ ಮೈಸೂರು ಅಧಿನಿಯಮ ಸಂಖ್ಯೆ 28) ರ 1ನೇ ಪ್ರಕರಣದ (3)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಈ ಮೂಲಕ, 1960ರ ಸೆಪ್ಟೆಂಬರ್ ಒಂದನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಜೆ.ವೆಂಕಟೇಶ ದಾಸ್

ಸರ್ಕಾರದ ಉಪ ಕಾರ್ಯದರ್ಶಿ,

ಲೋಕೋಪಯೋಗಿ ಇಲಾಖೆ (ನೀರಾವರಿ)

II

ಬೆಂಗಳೂರು, ದಿನಾಂಕ 20ನೇ ಆಗಸ್ಟ್ 1997

[ಸಂಖ್ಯೆ ಪಿ ಡಬ್ಲ್ಯೂಡಿ 47 ಜಿಐ ಜಿ 59]

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರು ದರ ವಿಧಿಸುವಿಕೆ)(ಎರಡನೇ ತಿದ್ದುಪಡಿ) ಅಧಿನಿಯಮ, 1995 (1995ರ ಅಧಿನಿಯಮ 21)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, 1997ರ ಜುಲೈ 1ನೇ ದಿನಾಂಕವನ್ನು ಸದರಿ ತಿದ್ದುಪಡಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜೆ.ಸಿ. ಚಿದಂಬರ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿಗಳು,

(ತಾಂತ್ರಿಕ), ನೀರಾವರಿ ಇಲಾಖೆ.

(ಎಸ್ ಒ 1241, ದಿನಾಂಕ 18.9.1997ರ ರಾಜ್ಯಪತ್ರದ ಭಾಗ IV–2 ಸಿ (ii), ಪುಟ 851)

* * *

The above translation of the Karnataka Irrigation (Levy of Betterment Contribution and Water Rate) Act, 1957 (Karnataka Act 28 of 1957) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಕೆ. ಬೋರೇಗೌಡ

ಪಿ.ಆರ್. 823

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.